ವಿಜಯಪುರ | ಸಂಪುಟ 02 | ಸಂಚಿಕೆ 83 | ಪುಟ 4 | ₹ 3.00
https://udayarashminews.com
udayarashmi 90088 88340

# ಉದಯ ರಶ್ಮಿ

Udayarashmi Kannada Daily
ಜನಪರ-ಜೀವಪರ
ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ
Editor: Indushekhar Manur

editor.udayarashmi@gmail.com RNI NO: KARKAN/2023/86203 ಭಾನುವಾರ, ಮೇ 19, 2024



"ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಬಂಧಿತರಾಗಿರುವ ಬಿಜೆಪಿ ಮುಖಂಡ ಮತ್ತು ವಕೀಲ ಜಿ ದೇವರಾಜೇಗೌಡ ಅವರು ಒಬ್ಬ ಮಾನಸಿಕ ಅಸ್ವಸ್ಥ, ಅವರಿಗೆ ಎಸ್ಐಟಿ ಸೂಕ್ತ ಚಿಕಿತ್ಸೆ ಕೊಡಿಸಬೇಕು. ಇಂತಹ ಆಧಾರ ರಹಿತ ಆರೋಪಗಳನ್ನು ಜೈಲಿನಲ್ಲಿರುವವರು ಹೇಗೆ ಮಾಡುತ್ತಾರೆ?"

– ಡಿ.ಕೆ. ಶಿವಕುಮಾರ್
ಉಪ ಮುಖ್ಯಮಂತ್ರಿಗಳು


ಉದಯರಶ್ಮಿ ದಿನಪತ್ರಿಕೆ

**ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಈ ಸ್ಥಿತಿ । ಶಿಕ್ಷಣ ಇಲಾಖೆ ದಿಕ್ಕಿಲ್ಲದ ಹಡಗು । ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪ**

# ಕಾಂಗ್ರೆಸ್ ನಿಂದ ಶಿಕ್ಷಣದ ಬುನಾದಿಯೇ ಅಸ್ಥಿರ :ಬಿವೈವಿ

ಬೆಂಗಳೂರು: ಪ್ರಾಥಮಿಕ ಶಿಕ್ಷಣವೆಂದರೆ ಕೇವಲ ಅಕ್ಷರ ಕಲಿಕೆಯಲ್ಲ ನಾಳಿನ ಪ್ರಜೆಗಳ ಭವ್ಯ ಭವಿಷ್ಯ ರೂಪಿಸುವ ನೈಜ ಅಡಿಪಾಯ. ಒಂದು ಸರ್ಕಾರ ಶಿಕ್ಷಣವನ್ನು ಆಲಕ್ಷಿಸಿದರೆ ದೇಶದ ಭವಿಷ್ಯವನ್ನು ಗಂಡಾಂತರಕ್ಕೆ ತಳ್ಳುವ ನೀಚ ಪ್ರವೃತ್ತಿಯಾಗುತ್ತದೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಶನಿವಾರ ಹೇಳಿದ್ದಾರೆ.

ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಅವರು, ಕಾಂಗ್ರೆಸ್ ಸರ್ಕಾರದ ಶಿಕ್ಷಣ ಇಲಾಖೆಯಲ್ಲಿ ಇಂತಹ ಪ್ರವೃತ್ತಿ ಮೇಳೈಸುತ್ತಿರುವ ಹಿನ್ನೆಲೆಯಲ್ಲಿ ಪ್ರಾಥಮಿಕ ಶಿಕ್ಷಣ ಅರಾಜಕತೆಯತ್ತ ಸಾಗಿದೆ, ಇದನ್ನು ಸ್ವತಃ ಮುಖ್ಯಮಂತ್ರಿಗಳೇ ಒಪ್ಪಿಕೊಂಡಿದ್ದಾರೆಂದು ಹೇಳಿದ್ದಾರೆ.



ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆ ದಿಕ್ಕಿಲ್ಲದ ಹಡಗಿನಂತೆ ಸಾಗಿದೆ. ತಮ್ಮ ಮಕ್ಕಳ ಉಜ್ವಲ ಭವಿಷ್ಯದ ಕನಸು ಕಂಡಿರುವ ಲಕ್ಷಾಂತರ ಪೋಷಕರ ಆತಂಕದ ಪ್ರಶ್ನೆಗಳಿಗೆ ಉತ್ತರಿಸುವವರಿಲ್ಲದೆ ಅವರ ವೇದನೆ ಅರಣ್ಯರೋಧನವಾಗಿದೆ.

ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಬದಿಗೆ ಸರಿಸುವ ವಿದ್ವತ್ತು ಪ್ರದರ್ಶಿಸಲು ಹೋಗಿ ನೈಜ ಶಿಕ್ಷಣ ವ್ಯವಸ್ಥೆಯನ್ನು ದಮನ ಮಾಡಲು ಹೊರಟ ಸರ್ಕಾರ 'ಚಾಲನೆಯ ಅನುಭವವಿಲ್ಲದ ಚಾಲಕನೊಬ್ಬ ವಾಹನ ಅಥವಾ ರೈಲು ಮುನ್ನಡೆಸಿದರೆ ಯಾವ ಸ್ಥಿತಿ ಉಂಟಾಗಬಹುದು' ಅಂತದ್ದೇ ಸ್ಥಿತಿ ಇಂದು ರಾಜ್ಯದ ಪ್ರಾಥಮಿಕ ಹಾಗೂ ಶಿಕ್ಷಣ ಇಲಾಖೆಗೆ ಒದಗಿ ಬಂದಿದೆ. 'ಮೇಟಿ ವಿದ್ಯೆಗೆ ರೈತ, ಅಕ್ಷರ ವಿದ್ಯೆಗೆ ವಿನಯವಂತನಿದ್ದರೆ ಕೃಷಿ–ಶಿಕ್ಷಣ ಎರಡೂ ಸಮೃದ್ಧವಾಗುತ್ತದೆ ಎಂದು ಟೀಕಿಸಿದ್ದಾರೆ.

ಮುಖ್ಯಮಂತ್ರಿಗಳು ಈ ನಿಟ್ಟಿನಲ್ಲಿ ವಿವೇಕ ಬಳಸದೆ ವಿದ್ಯಾ ಇಲಾಖೆಯನ್ನು ವಿಧೇಯತೆ ಗೊತ್ತಿಲ್ಲದವರ ಕೈಗೆ ಒಪ್ಪಿಸಿದ್ದ ಕಾರಣಕ್ಕಾಗಿ ಇಂದು ಅವರೇ ಪಶ್ಚಾತಾಪ ಪಡುವಂತಹ ಪರಿಸ್ಥಿತಿ ಉದ್ಭವಿಸಿದೆ. ಈಗಲಾದರೂ ಈ ನಾಡನ್ನು ಹಾಗೂ ದೇಶವನ್ನು ಭವಿಷ್ಯತ್ತಿನಲ್ಲಿ ಕಟ್ಟುವ ಲಕ್ಷಾಂತರ ಮಕ್ಕಳ ಭವಿಷ್ಯವನ್ನು ಅಂ–ಧಕಾರಕ್ಕೆ ತಳ್ಳಲ್ಪಡುತ್ತಿರುವ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆಯನ್ನು ಸರಿ ದಾರಿಗೆ ತರುವ ಕಟ್ಟುನಿಟ್ಟಿನ ಕ್ರಮ ವಹಿಸಲಿ. ಶಿಕ್ಷಣ ಬದ್ಧತೆ ಇದ್ದವರ ಕೈಗೆ ಇಲಾಖೆಯ ಸಾರಥ್ಯ ವಹಿಸಿಕೊಡಲಿ ಎಂದು ವಿಜಯೇಂದ್ರ ಆಗ್ರಹಿಸಿದ್ದಾರೆ.

### ರಾಜ ನುಡಿ

ಅಸಲಿಗಿಂತ ಬಡ್ಡಿಯ ಮೇಲೆ ಮನುಷ್ಯನಿಗೆ ಒಲವು ಹೆಚ್ಚಂತೆ. ಹಾಗೆಯೇ ಅಜ್ಜ–ಅಜ್ಜಿಗೆ ಮಕ್ಕಳಿಗಿಂತ ಮೊಮ್ಮಕ್ಕಳ ಮೇಲೆ ಪ್ರೀತಿ ಜಾಸ್ತಿ. ಪ್ರೀತಿಗೆ ಮೇಲ್ಮುಖಕ್ಕಿಂತ ಇಳಿಮುಖ ಹರಿವಿನ ಪ್ರಮಾಣ ಹೆಚ್ಚು.

–ಡಾ. ರಾಜಶೇಖರ ನಾಗೂರ

**3 ನೇ ದಿನಕ್ಕೆ ಕಾಲಿಟ್ಟ ಜಂಬಗಿ(ಆ), ಹುಣಶ್ಯಾಳ ಕೆರೆ ನೀರು ತುಂಬಿಸುವ ಸತ್ಯಾಗ್ರಹ**

# ಜಂಬಗಿ ಕೆರೆ ನೀರು ಹೋರಾಟಕ್ಕೆ ಸ್ವಾಮೀಜಿಗಳ ಬೆಂಬಲ

ಉದಯರಶ್ಮಿ ನ್ಯೂಸ್

ವಿಜಯಪುರ: ಜಿಲ್ಲೆಯ 2ನೇ ಅತೀ ದೊಡ್ಡ ಕೆರೆ ಜಂಬಗಿ ಆಗಿದ್ದು, ಈ ವರ್ಷ ಭೀಕರ ಬೇಸಿಗೆಯಲ್ಲಿ ಜಿಲ್ಲೆಯ ಎಲ್ಲಾ ಕೆರೆಗಳಿಗೆ ಕೆರೆ ನೀರು ತುಂಬುವ ಯೋಜನೆಯಡಿ ತುಂಬಿಸಲು ಈಗಾಗಲೇ ಎರಡು ಬಾರಿ ನೀರು ಹರಿಸಿ ಈಗ ಮೂರನೇ ಬಾರಿ ನೀರು ಹ–ರಿಸುತ್ತಿದ್ದರೂ ಜಂಬಗಿ ಕೆರೆಗೆ ಒಂದು ಹನಿ ನೀರು ಕೂಡ ಹರಿಸದೇ, ಕಳೆದ 10 ವರ್ಷಗಳಿಂದ ಈ ಭಾಗದ ರೈತರಿಗೆ ಅನ್ಯಾಯ ಮಾಡುತ್ತಿದ್ದಾರೆ. ಕೂಡಲೇ ಈ ಭಾಗದ ಕೆರೆ ತುಂಬಿಸಬೇಕು ಎಂದು ಮಲ್ಲಿಕಾರ್ಜುನ ಸ್ವಾಮಿಜಿ ಆಗ್ರಹಿಸಿದರು.

ಶನಿವಾರ ಅವರು ಹೋರಾಟಕ್ಕೆ ಬೆಂಬಲ ನೀಡಿ ಮಾತನಾಡಿದರು.

ಈ ಭಾಗದ ರೈತರಿಗೆ ನ್ಯಾಯ ಸಿಗಬೇಕಾದರೆ ಕೆರೆ ನೀರು ತುಂಬುವ ಯೋಜನೆಯಡಿ ಜಂಬಗಿ, ಹುಣಶ್ಯಾಳ ಮಾದಾಳ ಕೆರೆಗೆ ನೀರು





ಹರಿಸಬೇಕು, ಇಲ್ಲವಾದಲ್ಲಿ ಈ ಭಾಗದ ಎಲ್ಲಾ ರೈತರು, ಮಹಿಳೆಯರು, ಮಕ್ಕಳು, ಜಾನುವಾರುಗಳೊಂದಿಗೆ ಜಿಲ್ಲಾಧಿಕಾ–ರಿಗಳ ಕಚೇರಿ ಮುತ್ತಿಗೆ ಹಾಕಿ ನೀರು ಹರಿಸುವವರೆಗೂ ಅಲ್ಲಿಯೇ ಸತ್ಯಾಗ್ರಹ ಮಾಡಬೇಕಾಗುತ್ತದೆ. ನಾವೂ ಕೂಡಾ ಜಿಲ್ಲೆಯ ಎಲ್ಲಾ ಸ್ವಾಮೀಜಿಯವರೊಂದಿಗೆ ಸಂಪೂರ್ಣ ಬೆಂಬಲ ನೀಡಿ ಹೋರಾಟಕ್ಕೆ ಅಣಿಯಾಗಬೇಕಾಗುತ್ತದೆ ಎಂದು ಎಚ್ಚ–ರಿಸಿದರು.

ಈ ವೇಳೆ ರೈತ ಸಂಘದ ಮುಖಂಡ ಅನಮೇಶ ಜಮಖಂಡಿ ಮಾತನಾಡಿ, ಸಮೀಪದ ಕಗ್ಗೊಡ ಗ್ರಾಮದಲ್ಲಿ ಸಾಕಷ್ಟು ನೀರು ಹರಿಯುತ್ತಿದ್ದರೂ ಆಲಮಟ್ಟಿಯಿಂದ 187 ಕಿ.ಮೀ ನಾರಾಯಣಪುರಕ್ಕೆ ಹೋಗಿ ಮರಳಿ ದೇವರಹಿಪ್ಪರಗಿ ಕಾಲುವೆಗೆ ಬಂದು ಕೊನೆಯದಾಗಿ ಜಂಬಗಿವರೆಗೆ ನೀರು ಬರಬೇಕಾಗುವುದು, ಪ್ರತಿಸಲ ನೀರು ಈ ಭಾಗಕ್ಕೆ ಮುಟ್ಟುವದರೊಳಗೆ ಅವದಿ ಮುಗಿದು ನೀರು ಹರಿಸದೇ ಈ ಭಾಗದ ರೈತರಿಗೆ ಪ್ರತಿಸರ್ತಿ ಅನ್ಯಾಯ ಮಾಡುತ್ತಿದ್ದಾರೆ, ಆದ್ದರಿಂದ ಒಟ್ಟಾರೆಯಾಗಿ ನಮ್ಮ ಕೆರೆಗೆ ನೀರು ತುಂಬಿಸುವವರೆಗೂ ನಮ್ಮ ಹೋರಾಟವನ್ನು ಮರಳಿ ಪಡೆಯುವುದಿಲ್ಲ ಎಂದರು.

ಈ ವೇಳೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ವಿಜಯಪುರ ತಾಲೂಕಾ ಉಪಾಧ್ಯಕ್ಷರಾದ ಮಹಾದೇವಪ್ಪ ತೇಲಿ, ತಾ.ಉಪಾಧ್ಯಕ್ಷರಾದ ಪ್ರಕಾಶ ತೇಲಿ, ಸದಸ್ಯರಾದ ಕಲ್ಲಪ್ಪ ಮಸೂತಿ, ರಾಜಾರಾಮಸಿಂಗ ಡೋಣೂರ, ರಾಮಸಿಂಗ ರಜಪೂತ, ಶ್ರೀಶೈಲ ಮುಡಗಿ, ನಾಗಪ್ಪ ಬೂತಿ, ಕಲ್ಲಪ್ಪ ತಳವಾರ, ವಿನೋದ ಬಡಿಗೇರ, ಭೀಮರಾಯ ಗೋರನಾಳ, ಬಸವಂತ ತೇಲಿ, ಸಂಗಮೇಶ ತೇಲಿ, ಜಯಸಿಂಗ ರಜಪೂತ, ಬಸವರಾಜ ಮಸೂತಿ, ಸೇರಿದಂತೆ ಅನೇಕರು ಇದ್ದರು.

### ವಚನ ಚಿಂತನ 382



*ಸೋಮವಾರ ಮಂಗಳವಾರ*
*ಶಿವರಾತ್ರಿಯೆಂದು ಮಾಡುವ ಭಕ್ತರ*
*ಲಿಂಗಭಕ್ತಂಗೆ ನಾನೆಂತು ಸರಿಯೆಂಬೆನಯ್ಯಾ?*
*ದಿನ ಶ್ರೇಷ್ಠವೋ ಲಿಂಗ ಶ್ರೇಷ್ಠವೋ?*
*ದಿನ ಶ್ರೇಷ್ಠವೆಂದು ಮಾಡುವ*
*ಪಂಚಮಹಾಪಾತಕರ ಮುಖವ ನೋಡಲಾಗದು.*
*ಸೋಮೇ ಭೌಮೇ ವ್ಯತೀಪಾತೇ*
*ಸಂಕ್ರಾಂತಿಶಿವರಾತ್ರಯೋಃ*
*ಏಕಭುಕ್ತೋಪವಾಸೇನ ನರಕೇ*
*ಕಾಲಮಕ್ಷಯಂ*
*ಇದು ಕಾರಣ ಕೂಡಲಚೆನ್ನಸಂಗಯ್ಯಾ*
*ಇಂಥವರ ಮುಖವ ನೋಡಲಾಗದು.*

ಚೆನ್ನಬಸವಣ್ಣನವರು ಈ ವಚನದ ಮೂಲಕ ಶರಣನಾದವನಿಗೆ ದಿನಗಳಿಗಿಂತ ಲಿಂಗ ಶ್ರೇಷ್ಠ ಎಂದು ತಿಳಿ ಹೇಳುತ್ತಾ ದಿನಗಳು ಭೂಮಿಯ ಸುತ್ತುವಿಕೆಯಿಂದ ಉಂಟಾಗುತ್ತವೆ ವಿನಹ ಅವುಗಳಿಗೆ ಯಾವುದೇ ರೀತಿಯ ವಿಶೇಷ ಅರ್ಥ ಕಲ್ಪಿಸುವುದು ಸಲ್ಲ ಎಂದಿದ್ದಾರೆ.12ನೇ ಶತಮಾನದಿಂದ ಇಂದಿನವರೆಗೂ ಸಮಾಜದಲ್ಲಿ ವಾರ/ದಿನಗಳಿಗೆ ವಿಶೇಷ ಅರ್ಥವನ್ನು ಕಲ್ಪಿಸಿ ವಿವಿಧ ದೇವರುಗಳ ಹೆಸರುಗಳನ್ನು ತೋರಿಸಿ ಪೂಜೆಯ ಹೆಸರಿನಲ್ಲಿ ಮೌಢ್ಯತೆಯನ್ನು ಬೆಳೆಸುತ್ತಿರುವುದನ್ನು ಖಂಡಿಸಿದ್ದಾರೆ. ಶರಣ ನಿದ್ರೆಗೈದರೆ ಜಪ ಕಾಣಿರೋ ಶರಣನೆದ್ದರೆ ಶಿವರಾತ್ರಿ ಎಂದು ಹೇಳುವ ಮೂಲಕ ದಿನಗಳಿಗೆ ವಿಶೇಷ ಅರ್ಥ–ವನ್ನು ಕಲ್ಪಿಸದೆ ಜಂಗಮ/ಲಿಂಗಕ್ಕೆ ಹೆಚ್ಚು ಮಹತ್ವವನ್ನು ನೀಡಿ ಲಿಂಗ (ದೇವರ)ವನ್ನು ಅರಿತಕೊಳ್ಳು ವಂತೆ ತಿಳಿಹೇಳಿದ್ದಾರೆ . ಮೌಢ್ಯತೆಯನ್ನು ಆಚರಿಸುವವರ ಮುಖ ನೋಡದೆ ಅವರನ್ನು ದೂರವಿಡಲು ಸೂಚಿಸುತ್ತಾರೆ. ಶರಣರ ದೃಷ್ಟಿಯಲ್ಲಿ ಶಿವ (ಮಹಾಲಿಂಗ)ನೆಂದರೆ "ಅಸುರರ ಮಾಲೆಗಳಿಲ್ಲ, ತ್ರಿಶೂಲ ಡಮರುಗವಿಲ್ಲ, ಬ್ರಹ್ಮಕಪಾಲವಿಲ್ಲ, ಭಸ್ಮಭೂಷಣನಲ್ಲ, ವೃಷಭವಾಹನನಲ್ಲ, ಋಷಿಯರುಗಳೊಡನಿದ್ದಾತನಲ್ಲ. ಎಸಗುವ ಸಂಸಾರದ ಕುರುಹಿಲ್ಲದಾಂತಗೆ ಹೆಸರಾವುದಿಲ್ಲೆಂದನಂಬಿಗರ ಚೌಡಯ್ಯ." ಇದು ಶರಣರು ಕಂಡುಕೊಂಡ ಶಿವನ ಚಿತ್ರಣ ಇಂತಹ ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೆನಾನೊಲಿದೆ. ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ ಚೆಲುವಂಗೆ ನಾನೊಲಿದೆ ಎಲೆ ಅವ್ವಗಳಿರಾ ? ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೊಲಿದೆ ನಾನು. ಸೀಮೆಯಿಲ್ಲದ ನಿಸ್ಸೀಮಂ ಗೊಲಿದೆ ನಾನು. ಎನ್ನುವ ಅಕ್ಕನ ಶಿವನನ್ನು ಅರಿತು ಬೆರೆಯು ವುದು ಶರಣರ ಶಿವಯೋಗ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

**ನ್ಯಾಯಾಧೀಶ ಸಂತೋಷ ಎಸ್ ಕುಂದರ್ ರಿಗೆ ಕಾವ್ಯಾರ್ಪಣೆ ಮೂಲಕ ಬೀಳ್ಕೊಡುಗೆ**

# ಸೊನ್ನೆಯಿಂದ ಆರಂಭಿಸಿದ ಕಾರ್ಯ ಖಂಡಿತ ಯಶಸ್ವಿ :ನ್ಯಾ.ಕುಂದರ್

ಉದಯರಶ್ಮಿ ನ್ಯೂಸ್

ವಿಜಯಪುರ: ಸೊನ್ನೆಯಿಂದಲೇ ಪರಿಶ್ರಮಿಸಿ ಆರಂಭಿಸಿದ ಕಾರ್ಯ ನೂರಕ್ಕೆ ನೂರು ಯಶಸ್ವಿ ಆಗಲು ಸಾಧ್ಯವಾಗುತ್ತದೆ ಎಂದು ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ನ್ಯಾಯಾಧೀಶ ಸಂತೋಷ ಎಸ್ ಕುಂದರ್ ಅವರು ಹೇಳಿದರು.

ನ್ಯಾಯಾಧೀಶರಾದ ಕುಂದರ ಅವರು ವರ್ಗಾವಣೆ ಆಗಿರುವ ನಿಮಿತ್ಯ ಅವ–ರಿಗೆ ಇಲ್ಲಿನ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಪ್ರೊಬೊನೊ, ಪೆನಲ್, ಡಿಫೆನ್ಸ್ ಕೌಂಸಿಲ್, ಮದ್ಯಸ್ಥಗಾರ ವಕೀಲರು ಇವರುಗಳ ಸಂಯುಕ್ತ ಆಶ್ರಯದಲ್ಲಿ ಕಾನೂನು ಸೇವಾ ಪ್ರಾಧಿಕಾರದ ಸಭಾಂಗಣದಲ್ಲಿ ಏರ್ಪಡಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಕಾವ್ಯಾರ್ಪಣೆ ಮತ್ತು ಸನ್ಮಾನ ಸ್ವೀಕರಿಸಿ ಅವರು ಮಾತನಾಡುತ್ತಿದ್ದರು.



ಸಮಾಜದಲ್ಲಿರುವ ವಿವಿಧ ಕಾಯಕ ನಿರತರು ತಮ್ಮ ಕಾರ್ಯವನ್ನು ಪ್ರಮಾಣಿಕವಾಗಿ ನೂರಕ್ಕೆ ನೂರರಷ್ಟು ಅದರಲ್ಲೇ ತಲ್ಲೀನರಾಗಿ ಶ್ರಮಿಸಿದರೆ ಯಶಸ್ಸು ಹುಡುಕಿಕೊಂಡು ಬರುತ್ತದೆ, ನಾವು ಮಾಡುವ ಕೆಲಸ ಸಮಾಜ–ಕ್ಕೆ ದಾರಿ ದೀಪವಾಗಬೇಕು ಎಂದ ಅವರು ವಿಜಯಪುರದ ಜನರ ಹೃದಯ ವಿಶಾಲತೆ ಮೆಚ್ಚುವಂತಹದ್ದು, ಇಲ್ಲಿಯ ಉತ್ತಮ ಸಂಸ್ಕಾರ ಶ್ಲಾಘನಿಯ ಎಂದು ಬಣ್ಣಿಸಿದ ಅವರು ವಿಜಯಪುರ ಜಿಲ್ಲಾ ಕಾನೂನು ಸೇವ ಪ್ರಾಧಿಕಾರಕ್ಕೆ ಪ್ರೊಬೊನೊ ವಕಿಲರನ್ನು ಅಂದರೆ ಯಾವುದೇ ಗೌರವ ಧನವಿಲ್ಲದೇ ಉಚಿತವಾಗಿ ಕಾನೂನು ಸೇವೆ ಮಾಡುವ ಜನಸ್ನೇಹಿ [ಪ್ರೊಬೊನೊ] ವಕೀಲರನ್ನು ನನ್ನ ಕಾರ್ಯಾವಧಿಯಲ್ಲಿ ನೇಮಿಸಿದ್ದು, ಅದರಲ್ಲೂ ಹಿರಿಯ ನ್ಯಾಯವಾದಿ ಮಲ್ಲಿಕಾರ್ಜುನ ಭೃಂಗಿಮಠ ಅವರು ಜಿಲ್ಲೆಯಲ್ಲಿ ಪ್ರಥಮವಾಗಿ ಪ್ರೊಬೊನೊ ವಕೀಲರಾಗಿ ನೇಮಕವಾದ ವಕೀಲರಾಗಿದ್ದಾರೆ. ಅಲ್ಲದೇ ಇತರೇ ಇಬ್ಬರನ್ನು ಸಹ ನೇಮಿಸಲಾಗಿದ್ದು, ರಾಜ್ಯ ಕಾನೂನು ಸೇವಾ ಪ್ರಾಧಿಕಾರದಿಂದ ನೇಮಕಾತಿ ಮಾನ್ಯವಾಗಿದ್ದು ವಿಶೇಷವಾಗಿದೆ ಎಂದ ಅವರು ಜಿಲ್ಲೆಯಲ್ಲಿ ಕಾನೂನು ಸೇವಾ ಪ್ರಾಧಿಕಾರ ಜನಸ್ನೇಹಿ ಆಗಿ ಕಾರ್ಯ ನಿರ್ವಹಿಸಿದ್ದು ಜನರು ಸಹ ಉತ್ತಮ ಸಹಕಾರ ನೀಡಿದ್ದಾರೆ ಎಂದರು.

ಇನ್ನೋರ್ವ ಹಿರಿಯ ಶ್ರೇಣಿ ನ್ಯಾಯಾಧೀಶೆ ಶ್ರೀಮತಿ ಕೆ ಉಮಾ ಅವರು ಸನ್ಮಾನ ಸ್ವೀಕರಿಸಿ ಮಾತನಾಡಿ, ವಿಜಯಪುರಕ್ಕೆ ಬರುವಾಗ ಇಲ್ಲಿನ ಭಾಷೆ ಮತ್ತು ಜನರ ಕುರಿತು ಸ್ವಲ್ಪ ಆತಂಕ ಮನದಲ್ಲಿತ್ತು ಆದರೆ ಇಲ್ಲಿ ಬಂದು ಮೂರು ವರ್ಷ ಸೇವೆ ಸಲ್ಲಿಸಿದ ನಂತರ ಇಲ್ಲಿನ ಜನರಲ್ಲಿ ನ್ಯಾಯದ ಬಗ್ಗೆ ನ್ಯಾಯಾಲಯದ ಬಗ್ಗೆ ಇರುವ ಗೌರವ ಹೆಮ್ಮೆ ಕಂಡು ನಮಗೆ ಇನ್ನು ಉತ್ತಮವಾಗಿ ಕೆಲಸ ಮಾಡಲು ಸಾಧ್ಯವಾಯಿತು ಎಂದರು.

ಹಿರಿಯ ಪ್ರೊಬೊನೋ ನ್ಯಾಯವಾದಿ ಮಲ್ಲಿಕಾರ್ಜುನ ಜಿ ಭೃಂಗಿಮಠ ಅವರು ಕಾವ್ಯಭಾಷೆಯಲ್ಲೇ ಮಾತನಾಡಿ, ನ್ಯಾಯಾಧೀಶರಾದ ಕುಂದರ ಅವರು ಜಿಲ್ಲೆಯಲ್ಲಿ ಆಡದೇ ಕೆಲಸ ಮಾಡಿ ತೋ–ರಿಸಿದ ಸಾಧಕರು, ಅವರ ಅವಧಿಯಲ್ಲಿ ಪ್ರಾಧಿಕಾರವು ಜನರಿಗೆ ಕಾನೂನು ಅರಿವು ನೆರವು ನೀಡುವುದರ ಜೊತೆಗೆ ಅಲ್ಲಲ್ಲಿ ಇದ್ದ ಸಾಮಾಜಿಕ ಸಮಸ್ಸೆಗಳನ್ನು ಬಗೆ ಹರಿಸುವಲ್ಲಿ ಉತ್ತಮ ಕೆಲಸ ಮಾಡಿದ್ದಾರೆ. ವಿಜಯಪುರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಇತಿಹಾಸದಲ್ಲೇ ಪ್ರೊಬೊನೋ ವಕೀಲರನ್ನು ನೇಮಿಸಲು ಕಾರಣಿಗರಾದ ಕೀರ್ತಿ ಇವರ ಅವಧಿಗೆ ಸಲ್ಲುತ್ತದೆ ಎಂದರು.

ನ್ಯಾಯವಾದಿಗಳಾದ ಆರ್.ಎಸ್. ನಂದಿ, ಲಾಹೋರಿ, ಬಸವರಾಜ ಮಠ ಹಾಗೂ ಮಸೂತಿ ಮಾತನಾಡಿದರು.

ಕಾನೂನು ಮಹಾವಿದ್ಯಾಯದ ಪ್ರಾಚಾರ್ಯೆ ಸುಮಾ ದೇಸಾಯಿ ಕಾರ್ಯಕ್ರಮ ನಿರೂಪಿಸಿದರು. ಜಿಲ್ಲಾ ವಕೀಲರ ಸಂಘದ ಗೌರವ ಕಾರ್ಯದರ್ಶಿ ಅಶೋಕ ಜೈನಾಪೂರ ವಂದಿಸಿದರು.

ಕಾರ್ಯಕ್ರಮದಲ್ಲಿ ಹಿರಿಯು ನ್ಯಾಯವಾದಿಗಳಾದ ಕೆ.ಎಫ್. ಅಂಕಲಗಿ, ರಾಜು ಬಿದರಿ ಮುಂತಾದವರು ಇದ್ದರು.

ಉದಯ ರಶ್ಮಿ
ಪ್ರತಿ ಮನೆ-ಮನದ ಸಂಗಾತಿ

**ವಿದ್ಯಾರ್ಥಿ, ಪಾಲಕರಿಗೆ ಅನುಕೂಲವಾಗಲು ಹೆಲ್ಪ್ ಲೈನ್ ಆರಂಭಿಸಲು ಸರ್ಕಾರಕ್ಕೆ ಮನವಿ**

# ಡೊನೇಷನ್ ಹಾವಳಿ ತಡೆಗೆ ದಲಿತ ವಿದ್ಯಾರ್ಥಿ ಪರಿಷತ್ ಆಗ್ರಹ

ಉದಯರಶ್ಮಿ ನ್ಯೂಸ್

ವಿಜಯಪುರ: ಜಿಲ್ಲೆಯಲ್ಲಿ ಡೊನೇಷನ್ ಹಾವಳಿ ತಡೆಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಹಾಗೂ ಡೊನೇಷನ್ ವಿರುದ್ಧ ಜನಜಾಗೃತಿ ಮೂಡಿಸುವ ನಿಟ್ಟಿನಲ್ಲಿ ವಿಧ್ಯಾರ್ಥಿ, ಪಾಲಕರಿಗೆ ಅನುಕೂಲವಾಗಲು ಸರ್ಕಾರ ಕೊಡಲೇ ಹೆಲ್ಪೈನ್ ಆರಂಭಿಸಬೇಕೆಂದು ದಲಿತ ವಿದ್ಯಾರ್ಥಿ ಪರಿಷತ್ ಶನಿವಾರ ಜಿಲ್ಲಾಧಿಕಾ–ರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮತ್ತು ಶಿಕ್ಷಣ ಸಚಿವರಿಗೆ ಮನವಿ ಸಲ್ಲಿಸಿ ಆಗ್ರಹಿಸಿದರು.

ಮನವಿ ಸಲ್ಲಿಸಿ ಮಾತನಾಡಿದ ದಲಿತ ವಿದ್ಯಾರ್ಥಿ ಪರಿಷತ್ ಜಿಲ್ಲಾ ಸಂಚಾಲಕ ಅಕ್ಷಯ್ ಕುಮಾರ್ ಅಜಮನಿ, ಜಿಲ್ಲೆಯಲ್ಲಿ ದುಡ್ಡು ಇದ್ದವರಿಗೆ ಮಾತ್ರ ವಿದ್ಯಾಭ್ಯಾಸ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಫಲಿತಾಂಶ ಪ್ರಕಟವಾಗಿ ಮುಂದಿನ ಶಿಕ್ಷಣಕ್ಕೆ ಅಣಿಯಾಗುತ್ತಿದ್ದಂತೆ ವಿದ್ಯಾರ್ಥಿಗಳು ಮತ್ತು ಪಾಲಕರು ಡೊನೇಶನ್ ಹಾವಳಿ ಎದು–ರಿಸಬೇಕಾಗಿದೆ. ಇದರಿಂದ ಎಷ್ಟೋ ಜನ ವಿದ್ಯಾರ್ಥಿಗಳ ಶಿಕ್ಷಣದ ಕನಸು ಕಮರುತ್ತಿದೆ. ವಿದ್ಯಾರ್ಥಿಗಳಿಂದ ಕಡಿಮೆ ಶುಲ್ಕ ಪಡೆದು ಉತ್ತಮ ಶಿಕ್ಷಣ ನೀಡಬೇಕಾದ ವಿದ್ಯಾಸಂಸ್ಥೆಗಳು ಸರಕಾರದ ನಿಯಮಾವಳಿಗಳನ್ನು ಗಾಳಿಗೆ ತೂರಿ ಹಣ ವಸೂಲಿ ಮಾಡುತ್ತಿವೆ. ಡೊನೇಷನ್ ಹೆಸ–ರಿನಲ್ಲಿ ಹಗಲು ದರೋಡೆ ನಡೆಸುತ್ತಿದ್ದರೂ ಸರ್ಕಾರದ ಇಲಾಖೆಗಳು ಕ್ರಮ ಕೈಗೊಳ್ಳದೆ



ಮೌನವಾಗಿದ್ದು ಖಂಡನೀಯ ಎಂದರು.

ಡೊನೇಷನ್ ಹಾವಳಿ ತಡೆಗಟ್ಟಲು ಸರಕಾರದ ಸುತ್ತೋಲೆಗಳು ಹೆಸರಿಗೆ ಮಾತ್ರ ಎನ್ನುವಂತಾಗಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಮನಬಂದಂತೆ ಶುಲ್ಕ ನಿಗದಿ ಮಾಡಿಕೊಳ್ಳುತ್ತಿವೆ. ಡೊನೇಷನ್ ಹಾವಳಿ ತಡೆಗೆ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಲೇಬೇಕು. ಖಾಸಗಿ ಕಾಲೇಜುಗಳು ರೋಸ್ಟರ್ ಪದ್ಧತಿಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ತಿಳಿಸಬೇಕು. ಸರಕಾರಿ ಕಾಲೇಜುಗಳ ಸಂಖ್ಯೆ ಹೆಚ್ಚಿಸಿ ಮೂಲಭೂತ ಸೌಲಭ್ಯ ನೀಡಬೇಕು. ಮೇಲೆ ಹೇಳಿದಂತೆ ಖಾಸಗಿ ಕಾಲೇಜುಗಳು ಮನ ಬಂದಂತೆ ಡೊನೇಷನ್ ವಸೂಲಿ ಮಾಡುತ್ತಿವೆ. ಇದನ್ನು ತಡೆಯಲು ಸರಕಾರ ಕೂಡಲೇ ಮುಂದಾಗಬೇಕು ಎಂದರು.

ಶಿಕ್ಷಣ ವ್ಯಾಪಾರೀಕರಣಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ಸರಕಾರ ಹಲವು ಕಾಯಿದೆ ಜಾರಿಗೆ ತಂದಿದೆ. ಇದರ ಪ್ರಕಾರ ಅನುದಾನಿತ ಸಂಸ್ಥೆಗಳು, ಅನುದಾನರಹಿತ ಸಂಸ್ಥೆಗಳು ಅಭಿವೃದ್ಧಿ ಶುಲ್ಕವನ್ನು ಸರ್ಕಾರ ನಿಗದಿತ ಶುಲ್ಕ ಮಾತ್ರ ಸಂಗ್ರಹಿಸಲು ಅವಕಾಶವಿದೆ. ಹೆಚ್ಚು ಸಂಗ್ರಹಿಸುವುದು ಕಾನೂನು ಪ್ರಕಾರ ಅಪರಾಧವಾಗಿದೆ. ಆದ್ರೂ ಸರ್ಕಾರದ ನಿಯಮ ಉಲ್ಲಂಘಿಸಿ ಅಭಿವೃದ್ಧಿ ಶುಲ್ಕದ ಹೆಸರಿನಲ್ಲಿ ವಿದ್ಯಾರ್ಥಿ, ಪಾಲಕರಿಂದ ಮನಸ್ಸಿಗೆ ಬಂದಂತೆ ಶುಲ್ಕ ಸಂಗ್ರಹಿಸಲಾಗುತ್ತಿದೆ. ಜಿಲ್ಲಾ ಮಟ್ಟದಲ್ಲಿ ಶಿಕ್ಷಣ ಸಂಸ್ಥೆಗಳು, ವಿದ್ಯಾರ್ಥಿ ಪ್ರತಿನಿಗಳು, ಪೋಷಕರು ಹಾಗೂ ಸಂಸ್ಥೆಗಳನ್ನೊಳಗೊಂಡ ಸಮಿತಿ ರಚಿಸಿ ಅಲ್ಲಿ ಇದರ ಬಗ್ಗೆ ಚರ್ಚಿಸಬೇಕು. ಈ ಪ್ರಕ್ರಿಯೆ ಎಲ್ಲಿಯೂ ಜಾರಿಗೆ ಬರುತ್ತಿಲ್ಲ. ಈ ಪ್ರಕ್ರಿಯೆ ಜಾರಿಯಾಗದ ಪರಿಣಾಮ ಮನ ಬಂದಂತೆ ವಂತಿಗೆ ವಸೂಲಿ ಮಾಡಲಾಗುತ್ತಿದೆ. ಕಾರಣ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಶಿಕ್ಷಣ ರೆಗ್ಯುಲೇಟಿಂಗ್ ಸಮಿತಿ ರಚಿಸಬೇಕು. ಕಾಲೇಜುಗಳ ಮಕ್ಕಳ ಸಂಖ್ಯೆ ಪ್ರಕಾರ ಸಂಸ್ಥೆಯ ಆದಾಯ ಕ್ರೂಢಿಕರಿಸಿ ಇಲಾಖೆಯೇ ಶುಲ್ಕ ನಿಗದಿ ಮಾಡಬೇಕು. ಸಂಘಟನೆಗಳ, ಪಾಲಕರ ಜಂಟಿ ಸಭೆ ಕರೆದು ವಿದ್ಯಾರ್ಥಿಗಳು ಎದುರಿಸುವ ಸಮಸ್ಯೆ ಚರ್ಚಿಸುವಂತಾಗಬೇಕು.

ಡೊನೇಷನ್ ಹಾವಳಿ ತಡೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ವಿಧ್ಯಾರ್ಥಿ ಹಾಗೂ ಪಾಲಕರಿಗೆ ಮಾಹಿತಿ ನೀಡಲು ಸರ್ಕಾರ ಹೊಸದಾಗಿ ಆದೇಶ ಹೊರಡಿಸಬೇಕು. ಡೊನೇಷನ್ ವಸೂಲಿ ತಡೆಯಲು ಕೊಡಲೇ ಸರ್ಕಾರ ವಿಧ್ಯಾರ್ಥಿ ಹಾಗೂ ಪಾಲಕರಿಗೆ ಡೊನೇಷನ್ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ಅರಿವು ಮೂಡಿಸಲು ಉಚಿತ ಹೆಲ್ಪ್ ಲೈನ್ (ದೂರವಾಣಿ) ಆರಂಭಿಸಬೇಕು. ಕನಿಷ್ಠ ಪಕ್ಷ ಇದರಿಂದ ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ತುಂಬಾ ಸಹಾಯಕವಾಗಬಹುದು ಎಂದರು.

ಡೊನೇಷನ್ ಹಾವಳಿ ತಡೆಯಲು ಕಟ್ಟುನಿಟ್ಟಿನ ಸರ್ಕಾರ ಕ್ರಮ ಕೈಗೊಳ್ಳಬೇಕು. ಈ ವಿಚಾರದಲ್ಲಿ ಸರ್ಕಾರ ವಿಳಂಬ ನೀತಿ ಅನುಸರಿಸಿದರೆ ಮುಂದಿನ ದಿನಗಳಲ್ಲಿ ದಲಿತ ವಿದ್ಯಾರ್ಥಿ ಪರಿಷತ್ ಅಲ್ಲದೇ ವಿದ್ಯಾರ್ಥಿ, ಪಾಲಕರೊಂದಿಗೆ ಜೊತೆಗೂಡಿ ಡೊನೇಷನ್ ಹಾವಳಿ ವಿರುದ್ಧ ಬೀದಿಗೆ ಇಳಿದು ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ದಲಿತ ವಿದ್ಯಾರ್ಥಿ ಪರಿಷತ್ನ ಮುಖಂಡರಾದ ಆನಂದ ಮುದೂರ, ಮಾದೇಶ ಛಲವಾದಿ, ಯಾಶಿನ್ ಇನಾಮದಾರ, ಯುವರಾಜ್ ಓಲೇಕಾರ್, ಅಜಯ್ ರಾಥೋಡ್, ಮಹಾಂತೇಶ್ ಛಲವಾದಿ, ಯಮನುರಿ ಮಾದರ್, ಮುಂತಾದವರು ಉಪಸ್ಥಿತ–ರಿದ್ದರು.

# ಲಂಚ ಪಡೆಯುತ್ತಿದ್ದ ಸರ್ವೇಯರ್ ಲೋಕಾ ಬಲೆಗೆ



**ಉದಯರಶ್ಮಿ ನ್ಯೂಸ್**

ವಿಜಯಪುರ: ಜಮೀನಿನ ತತ್ಕಾಲ್ ಪೋಡಿ ಮಾಡಲು ಲಂಚ ಪಡೆಯುತ್ತಿದ್ದ ಸರ್ವೇಯರ್ ಮತ್ತು ಖಾಸಗಿ ವ್ಯಕ್ತಿ ಲೋಕಾಯುಕ್ತರ ಬಲೆಗೆ ಸಿಲುಕಿದ ಘಟನೆ ವಿಜಯಪುರದಲ್ಲಿ ನಡೆದಿದೆ.

ಪ್ರಕಾಶ ಸಿಂಗೆ ಎಬುವರು ತಮ್ಮ ನಾಲ್ಕು ಎಕರೆ ಜಮೀನಿನ ತತ್ಕಾಲ ಪೋಡಿ ಮಾಡಲು ಅರ್ಜಿ ಸಲ್ಲಿಸಿದ್ದರು. ಆದರೆ, ಈ ಕೆಲಸಕ್ಕಾಗಿ ಸರ್ವೇಯರ್ ಮಲ್ಲಪ್ಪ ಜಂಬಗಿ ಮತ್ತು ಖಾಸಗಿ ಸಹಾಯಕ ಗುರುದತ್ತ ಬಿರಾದಾರ ಅವರು ರೂ. 47,500 ಲಂಚ ಕೇಳಿದ್ದರು. ಈ ಹಿನ್ನೆಲೆಯಲ್ಲಿ ಪ್ರಕಾಶ ಸಿಂಗೆ ಲೋಕಾಯುಕ್ತರ ಮೊರೆ ಹೋಗಿದ್ದರು.

ಈ ಮಧ್ಯೆ ತತ್ಕಾಲ ಪೋಡಿ ಮಾಡಿಕೊಡಲು ಲಂಚ ಪಡೆಯುವಾಗ ಧಾಳಿ ನಡೆಸಿದ ಪೊಲೀಸರು ಸರ್ವೇಯರ್ ಮಲ್ಲಪ್ಪ ಜಂಬಗಿ ಮತ್ತು ಖಾಸಗಿ ಸಹಾಯಕ ಗುರುದತ್ತ ಬಿರಾದಾರ ಅವರನ್ನು ಬಂಧಿಸಿದ್ದಾರೆ. ಅಲ್ಲದೇ, ರೂ. 47,500 ಹಣವನ್ನು ವಶಪಡಿಸಿಕೊಂಡಿದ್ದಾರೆ.

# ಬರ ಪರಿಹಾರ ಹಣ ರೈತರ ಸಾಲಕ್ಕೆ ಕಡಿತಗೊಳಿಸದಿರಿ :ಡಿಸಿ

**ಉದಯರಶ್ಮಿ ನ್ಯೂಸ್**

ವಿಜಯಪುರ: ಕರ್ನಾಟಕ ಸರ್ಕಾರ ಜಿಲ್ಲೆಯ ರೈತರಿಗೆ ಬರ ಪರಿಹಾರವಾಗಿ 36010.20 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದ್ದು, ಇದು ರೈತರ ಬರ ಪರಿಹಾರ ಹಣವಾಗಿರುವುದ–ರಿಂದ ಯಾವುದೇ ಕಾರಣಕ್ಕೂ ರೈತರ ಸಾಲಗಳಿಗೆ ಈ ಹಣವನ್ನು ಕಡಿತಗೊಳಿಸಬಾರದು ಎಂದು ಜಿಲ್ಲಾಧಿಕಾರಿ ಟಿ. ಭೂಬಾಲನ್ ಸೂಚಿಸಿದ್ದಾರೆ.

ಈ ಕುರಿತು ಪ್ರಕಟಣೆ ಬಿಡುಗಡೆ ಮಾಡಿದ ಅವರು, ರಾಜ್ಯ ಸರ್ಕಾರದಿಂದ ನೇರವಾಗಿ ರೈತರ ಖಾತೆಗಳಿಗೆ ಬರ ಪರಿಹಾರದ ಹಣ ಬಿಡುಗಡೆ ಮಾಡಿದೆ. ಇದನ್ನು ರೈತರ ಸಾಲದ ಖಾತೆಗೆ ಜಮೆ ಮಾಡಿಕೊಳ್ಳಬಾರದು ಎಂದು ಲೀಡ್ ಬ್ಯಾಂಕ್ ವ್ಯವಸ್ಥಾಪಕರು ಹಾಗೂ ವಿಜಯಪುರ ಸಹಕಾರ ಸಂಘಳ ಇಲಾಖೆಯ ಉಪ ನಿಬಂಧಕರಿಗೆ ಸೂಚಿಸಲಾಗಿದೆ. ಈಗಾಗಲೇ ಮುಂಗಾರು ಆರಂಭವಾಗುತ್ತಿರುವುದರಿಂದ ಬರ ಪರಿಹಾರದ ಹಣ ರೈತರು ಬೀಜ, ರಸಗೊಬ್ಬರ, ಹೊಲದ ಉಳುಮೆ, ಬಿತ್ತನೆಗೆ ಸಿದ್ಧಮಾಡಿಕೊಳ್ಳಲು ಸಹಾಯವಾಗುತ್ತದೆ. ಹಾಗಾಗಿ ಬ್ಯಾಂಕ್‌ಗಳು ರೈತರಿಗೆ ಸಹಕ–ರಿಸಬೇಕು ಎಂದು ತಿಳಿಸಿದ್ದಾರೆ.

# ಲೋಕಾಯುಕ್ತ ಅಧಿಕಾರಿಗಳಿಂದ ಮೇ.21ರಂದು ಅಹವಾಲು ಸ್ವೀಕಾರ

**ಉದಯರಶ್ಮಿ ನ್ಯೂಸ್**

ವಿಜಯಪುರ: ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧಿಕಾ–ರಿಗಳು ಜಿಲ್ಲೆಯ ಮುದ್ದೇಬಿಹಾಳ ತಹಶೀಲ್ದಾರ ಕಚೇರಿಯಲ್ಲಿ ಮೇ.21ರಂದು ಬೆಳಗ್ಗೆ 11 ಗಂಟೆಯಿಂದ ಸಾರ್ವಜನಿಕ ಅಹವಾಲುಗಳನ್ನು ಸ್ವೀಕರಿಸಲಿದ್ದಾರೆ.

ಲೋಕಾಯುಕ್ತ ಪೊಲೀಸ್ ಅಧೀಕ್ಷಕರು (9364062528) ಉಪಾಧೀಕ್ಷಕರ (ಮೊ:9364062557), ಪೊಲೀಸ್ ಇನ್‌ಸ್ಪೆಕ್ಟರ್ –1 (ಮೊ:9364062640), ಪೊಲೀಸ್ ಇನ್‌ಸ್ಪೆಕ್ಟರ್ –2 (ಮೊ:9364062639) ಇವರು ಅಂದು ಬೆಳಿಗ್ಗೆ 11 ಗಂಟೆಯಿಂದ ಸಾರ್ವಜನಿಕ ಅಹವಾಲುಗಳನ್ನು ಸ್ವೀಕರಿಸಲಿದ್ದಾರೆ.

ಅಹವಾಲು ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಭರ್ತಿ ಮಾಡಿದ ಮತ್ತು ನೋಟರಿಯಿಂದ ಅಫಿಡವಿಟ್ ಮಾಡಿಸಿದ ಅರ್ಜಿಗಳನ್ನು ಸ್ವೀಕ–ರಿಸಲಾಗುವುದು. ಸರ್ಕಾರಿ ಕಚೇರಿಗಳಲ್ಲಿ ಅಧಿಕೃತವಾಗಿ ಕೆಲಸಗಳನ್ನು ಮಾಡಿಕೊಡುವಲ್ಲಿ ವಿಳಂಬ ಹಾಗೂ ಲಂಚದ ಬೇಡಿಕೆ ಇನ್ನಿತರೆ ತೊಂದರೆ ನೀಡುತ್ತಿರುವ ಅಧಿಕಾರಿ–ಸಿಬ್ಬಂದಿಗಳ ವಿರುದ್ದ ಸಾರ್ವಜನಿಕರು ದೂರುಗಳನ್ನು ನೀಡಬಹುದಾಗಿದೆ. ಸ್ಥಳದಲ್ಲಿ ಪರಿಹಾರ ಕಂಡುಕೊಳ್ಳಬಹುದಾದ ದೂರುಗಳನ್ನು ಅಲ್ಲಿನ ಸ್ಥಳೀಯ ಅಧಿಕಾರಿಗಳ ಸಹಯೋಗದಲ್ಲಿ ಇತ್ಯರ್ಥಪಡಿಸಲು ಪ್ರಯತ್ನಿಸಲಾಗುವುದು ಹಾಗೂ ಸರಕಾರಿ ಅಧಿಕಾರಿಗಳು ಅಕ್ರಮ ಆಸ್ತಿ ಸಂಪಾದನೆ, ಸರಕಾರಿ ಹಣದ ದುರುಪಯೋಗ, ಕಳಪೆ ಕಾಮಗಾರಿ ಹಾಗೂ ಇತರೆ ಯಾವುದೇ ರೀತಿಯ ದೂರುಗಳಿಗಾಗಿ ಕಚೇರಿ ದೂರವಾಣಿ: 08352–255333, 257786, 295074 ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ ಎಂದು ಲೋಕಾಯುಕ್ತ ಪೊಲೀಸ್ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕ್ಯಾಂಟರ್ ವಾಹನ ತಡೆದು 32ಲಕ್ಷ ರೂ. ದರೋಡೆ

**ಉದಯರಶ್ಮಿ ನ್ಯೂಸ್**



ವಿಜಯಪುರ: ಬಸವ ನಾಡು ವಿಜಯಪುರ ಜಿಲ್ಲೆಯಲ್ಲಿ ಶುಕ್ರವಾರ ತಡರಾತ್ರಿ ದರೋಡೆ ನಡೆದಿದೆ.

ವಿಜಯಪುರ ಜಿಲ್ಲೆಯ ಕೊಲ್ಹಾರ ಪಟ್ಟಣದ ಹೊರ ವಲಯದಲ್ಲಿ ಶುಕ್ರವಾರ ತಡರಾತ್ರಿ ಕ್ಯಾಂಟರ್ ವಾಹನ ತಡೆದ ದುಷ್ಕರ್ಮಿಗಳು ಚಾಲಕ ಮತ್ತೋರ್ವನ ಮೇಲೆ ಖಾರದ ಪುಡಿ ಎರಚಿ ರಾಡ್ ನಿಂದ ಹಲ್ಲೆ ಮಾಡಿ ಕ್ಯಾಂಟರ್ ನಲ್ಲಿದ್ದ ರೂ. 32 ಲಕ್ಷ ರೂಪಾಯಿ ನಗದನ್ನು ದೋಚಿಕೊಂಡು ಪರಾ–ರಿಯಾಗಿದ್ದಾರೆ.

ಈ ಘಟನೆಯಲ್ಲಿ ದರೋಡೆಕೋರರಿಂದ ಹಲ್ಲೆಗೀಡಾದ ಕ್ಯಾಂಟರ್ ಚಾಲಕ ಮಹಾಂತೇಶ ಕುಂಬಾರ ಹಾಗೂ ಕ್ಲೀನರ್ ಮಲ್ಲು ಕೊಡಚಿ ಅವರಿಗೆ ಕೊಲ್ಹಾರ ಪಟ್ಟಣದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಸುದ್ದಿ ತಿಳಿದ ತಕ್ಷಣ ವಿಜಯಪುರ ಎಸ್ಪಿ ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದು, ದರೋಡೆಗೆ ಒಳಗಾದವರಿಂದ ಮತ್ತು ಸ್ಥಳೀಯ ಪೊಲೀಸರಿಂದ ಮಾಹಿತಿ ಪಡೆದು ಆರೋಪಿಗಳ ಬಂಧನಕ್ಕೆ ಸೂಚನೆ ನೀಡಿದ್ದಾರೆ.

ಘಟನೆಯ ಹಿನ್ನೆಲೆ: ಕಲಬುರಗಿ ಜಿಲ್ಲೆಯ ಜೀವರ್ಗಿ ಪಟ್ಟಣದ ಹತ್ತಿ ವ್ಯಾಪಾರಿ ಚಂದ್ರಕಾಂತ ಕುಂಬಾರ ಎಂಬುವರು ರೈತರಿಂದ ಹತ್ತಿ ಸಂಗ್ರಹಿಸಿದ್ದರು. ಅಲ್ಲದೇ, ಈ ಹತ್ತಿಯನ್ನು ಧಾರವಾಡ ತಾಲೂಕಿನ ಅಮ್ಮಿನಭಾವಿ ಗ್ರಾಮದಲ್ಲಿರೋ ಹತ್ತಿ ಕಾರ್ಖಾನೆಯಲ್ಲಿ ಮಾರಾಟಕ್ಕೆ ಕಳುಹಿಸಿದ್ದರು. ಈ ಹತ್ತಿ ಮಾರಾಟ ಮಾಡಿದ ಕ್ಯಾಂಟರ್ ಚಾಲಕ ಮಹಾಂತೇಶ ಕುಂಬಾರ ಮತ್ತು ಕ್ಲೀನರ್ ಮಲ್ಲು ಕೊಡಚಿ ಹತ್ತಿ ಮಾರಾಟದಿಂದ ದೊರೆತ ರೂ.32 ಲಕ್ಷ ನಗದು ಹಣದೊಂದಿಗೆ ಜೇವರ್ಗಿಗೆ ವಾಪಸ್ಸಾಗುತ್ತಿದ್ದರು. ಆದರೆ, ಶುಕ್ರವಾರ ತಡರಾತ್ರಿ ವಿಜಯಪುರ ಜಿಲ್ಲೆಯ ಕೊಲ್ಹಾರ ಪಟ್ಟಣದ ಬಳಿ ಕೆಲವು ದುಷ್ಕರ್ಮಿಗಳು ಬುಲೆರೋ ವಾಹನ ತಂದು ನಿಲ್ಲಿಸಿ ಕ್ಯಾಂಟರ್ ವಾಹನವನ್ನು ಅಡ್ಡಗಟ್ಟಿದ್ದಾರೆ. ಅಷ್ಟೇ ಅಲ್ಲ, ನಂತರ ಕ್ಯಾಂಟರ್ ಮೇಲೆ ಕಲ್ಲು ಎಸೆದು ಗಾಜನ್ನು ಜಖಂ ಮಾಡಿದ್ದಾರೆ. ನಂತರ ಮಹಾಂತೇಶ ಕುಂಬಾರ ಮತ್ತು ಮಲ್ಲು ಕೊಡಚಿ ಅವರ ಕಣ್ಣಿಗೆ ಖಾರದ ಪುಡಿ ಎರಚಿಸಿದ್ದಾರೆ. ಅಲ್ಲದೇ, ಕ್ಯಾಂಟರ್ ನಲ್ಲಿದ್ದ ಇವ–ರಿಬ್ಬರ ಮೇಲೆ ರಾಡ್ ನಿಂದ ಹಲ್ಲೆ ಮಾಡಿ ಗಾಯಗೊಳಿಸಿದ್ದಾರೆ. ಬಳಿಕ ಇವರ ಬಳಿಯಿದ್ದ ರೂ. 32 ಲಕ್ಷ ನಗದು ದೋಚಿಕೊಂಡು ಪರಾರಿಯಾಗಿದ್ದಾರೆ ಎಂದು ಆರೋಪಿಸಲಾಗಿದೆ.

ಘಟನಾ ಸ್ಥಳಕ್ಕೆ ಹಿರಿಯ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಈ ಘಟನೆಯ ಸುದ್ದಿ ತಿಳಿಯುತ್ತಿದ್ದಂತೆ ಕೊಲ್ಹಾರ ಪೊಲೀಸರು ಸ್ಥಳಕ್ಕೆ ದೌಡಾಯಿಸಿದ್ದಾರೆ. ಅಲ್ಲದೇ, ಈ ಕುರಿತು ಮಾಹಿತಿ ಪಡೆದ ವಿಜಯಪುರ ಎಸ್ಪಿ ಋಷಿಕೇಶ ಸೋನಾವಣೆ ಕೂಡ ಸಿಬ್ಬಂದಿಯೊಂದಿಗೆ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಅಲ್ಲದೇ, ಈ ಪ್ರಕರಣದ ತನಿಖೆಗೆ ಪೊಲೀಸರ ತಂಡವನ್ನು ರಚಿಸಿದ್ದಾರೆ. ಜಿಲ್ಲೆಯಲ್ಲಿ ನಡೆದ ಈ ದರೋಡೆ ಪ್ರಕರಣ ಜಿಲ್ಲಾದ್ಯಂತ ಸಂಚಲನ ಮೂಡಿಸಿದ್ದು, ಜನತೆ ಬೆಚ್ಚಿ ಬಿದ್ದಿದ್ದಾರೆ. ಪೊಲೀಸರು ಈ ಘಟನೆಯ ಸಮಗ್ರ ತನಿಖೆ ನಡೆಸಿದ ನಂತರ ಈ ಕುರಿತು ಹೆಚ್ಚಿನ ಮಾಹಿತಿ ಸಿಗಲಿದೆ.




# ಸಾಧನೆಗೆ ಸೌಕರ್ಯಗಳಿಗಿಂತ ಆತ್ಮಸ್ಥೈರ್ಯ ಮುಖ್ಯ

**ಉದಯರಶ್ಮಿ ನ್ಯೂಸ್**



ವಿಜಯಪುರ: ಸಾಧನೆಗೆ ಸೌಕರ್ಯಗಳಿಗಿಂತ ಆತ್ಮಸ್ಥೈರ್ಯ, ಕಠಿಣ ಪರಿಶ್ರಮ, ಛಲ ಬಹಳ ಮುಖ್ಯ. ಉನ್ನತ ಗುರಿ ಸಾಧಿಸಲು ವಿದ್ಯಾರ್ಥಿಗಳಿಗೆ ಬಡತನ ಅಡ್ಡಿ ಆಗಬಾರದು. ನಿರಂತರ ಅಧ್ಯಯನಶೀಲರಾದಾಗ ಯಶಸ್ಸು ಕಟ್ಟಿಟ್ಟ ಬುತ್ತಿ ಎಂದು ಶಿಕ್ಷಕ ಸಂತೋಷ ಬಂಡೆ ಹೇಳಿದರು.

ಶನಿವಾರದಂದು ತಾಲೂಕಿನ ನಾಗಠಾಣ ಗ್ರಾಮದಲ್ಲಿ 2023–24 ನೇ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಸಾಧನೆಗೈದ ವಿದ್ಯಾರ್ಥಿಗಳ ಶುಭಹಾರೈಕೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇಂದಿನ ವಿದ್ಯಾರ್ಥಿಗಳು ಸಂಸ್ಕಾರಯುತವಾಗಿ ದೃಢ ಸಂಕಲ್ಪದೊಂದಿಗೆ ಗುರಿ ಸಾಧನೆಗೆ ಮುಂದಾಗಬೇಕು. ನಿರಂತರ ಪರಿಶ್ರಮ ಶ್ರದ್ಧೆಯಿಂದ ಪ್ರಯತ್ನಪಟ್ಟಲ್ಲಿ ಗುರಿ ಸಾಧನೆ ಸುಲಭವಾಗುತ್ತದೆ. ಕಡು ಬಡತನವು ಸಾಧನೆಗೆ ಪ್ರೇರಕ ಶಕ್ತಿ ಎಂಬುದಕ್ಕೆ ದಾನಮ್ಮ ಕುಂಬಾರ ಅವಳೇ ಪ್ರತ್ಯಕ್ಷ ಸಾಕ್ಷಿ ಎಂದು ಹೇಳಿದರು.

ಶಾಲೆಗೆ ಟಾಪರ್ ವಿದ್ಯಾರ್ಥಿನಿ ದಾನಮ್ಮ ಕುಂಬಾರ ಮಾತನಾಡಿ, ನನ್ನ ತಂದೆ–ತಾಯಿ ಇಬ್ಬರೂ ಪಾರ್ಶ್ವವಾಯು ಪೀಡಿತರಾಗಿ ಕುಟುಂಬ ನಿರ್ವಹಣೆ ದುಸ್ತರವಾಗಿದ್ದರೂ ಸಹಿತ ಅವರ ಆರೈಕೆ ಮಾಡುತ್ತಾ ನಿರಂತರ ಪ್ರಯತ್ನಶೀಲತೆ ಗುಣವನ್ನು ಮೈಗೂಡಿಸಿಕೊಂಡು ಶಾಲೆಗೆ ಪ್ರಥಮ ಸ್ಥಾನ ಪಡೆದದ್ದು ನನಗೆ ಹೆಮ್ಮೆ ತಂದಿದೆ ಎಂದು ಹೇಳಿದರು.

ಡಿಸಿಸಿ ಬ್ಯಾಂಕ್ ಮ್ಯಾನೇಜರ್ ಸಾಯಬಣ್ಣ ಗೌಡೆನ್ನವರ ಮಾತನಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ಎದುರಾಗುವ ಕಷ್ಟಗಳನ್ನು ಮೆಟ್ಟಿ ನಿಲ್ಲಬೇಕು. ಸವಾಲುಗಳನ್ನು ಧೈರ್ಯದಿಂದ ಎದುರಿಸಿ ಹೋರಾಡಿ ಗುರಿ ಮುಟ್ಟಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಕರ್ನಾಟಕ ಪಬ್ಲಿಕ್ ಪ್ರೌಢಶಾಲೆಗೆ ಪ್ರಥಮ ಸ್ಥಾನ ಪಡೆದ ದಾನಮ್ಮ ಕುಂಬಾರ(88.64), ದ್ವಿತೀಯ ಸ್ಥಾನ ಪಡೆದ ಭಾಗ್ಯಶ್ರೀ ಕುಂಬಾರ (88) ಅವರನ್ನು ಸನ್ಮಾನಿಸಲಾಯಿತು.

ಗ್ರಾಮದ ರಾಜು ಕತ್ನಳ್ಳಿ, ಅಮೋಘಸಿದ್ಧ ಕುಂಬಾರ, ಸುರೇಶ ಕತ್ನಳ್ಳಿ, ಸಾಯಬಣ್ಣ ಕುಂಬಾರ, ಸುರೇಖಾ ಬಂಡೆ, ಸುಜಾತಾ ಗಿರಿಸಾಗರ, ಅನಿಲ ಬಗಲಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಇನ್ನಷ್ಟು ಬೇಕಾಗಿವೆ.. ಸಾಮಾಜಿಕ ನೀತಿ ಸಂಹಿತೆಗಳು

**ಉದಯರಶ್ಮಿ ದಿನಪತ್ರಿಕೆ**

**ವೀಣಾಂತರಂಗ**



–ವೀಣಾ ಎಚ್. ಪಾಟೀಲ್, ಮುಂಡರಗಿ

ವಿವಿಧ ಸಂಸ್ಕೃತಿಗಳು, ಜಾತಿಗಳು, ಮತಗಳು, ಆಚ–ರಣೆಗಳು ರೂಢಿಯಲ್ಲಿರುವ ಭಾರತ ದೇಶದಲ್ಲಿ ಒಂದು ಅಲಿಖಿತ ಸಾಮಾಜಿಕ ನೀತಿ ಸಂಹಿತೆ ಜಾ–ರಿಯಲ್ಲಿದೆ. ಕೆಲವೊಮ್ಮೆ ಪುರಾತನ ಎಂದೆನ್ನಿಸಿದರೂ ಕೂಡ ನಮ್ಮ ಸಂಸ್ಕೃತಿಯ ಮೂಲ ಬೇರುಗಳನ್ನು ಎತ್ತಿ ಹಿಡಿಯುವ ಮಾನವೀಯ ಪ್ರಜ್ಞೆಯನ್ನು ಒಳಗೊಂಡಿರುವ ಕೆಲ ಸಾಮಾಜಿಕ ನಿಯಮಾವಳಿಗಳು ಇಂದಿಗೂ ನಮ್ಮ ಸಮಾಜದ ಸ್ವಾಸ್ಥ್ಯವನ್ನು ಕಾಯುತ್ತವೆ.

ಇನ್ನೇನು ಕೆಲವೇ ದಿನಗಳಲ್ಲಿ ಚುನಾವಣೆ ಬರುತ್ತದೆ ಎನ್ನುವಾಗ ಜಾರಿಯಾಗುವ ಚುನಾವಣಾ ನೀತಿಸಂಹಿತೆಯಂತೆ ನಮ್ಮ ಸಾಮಾಜಿಕ ನೀತಿ ಸಂಹಿತೆಯು ಕೂಡ ಬದಲಾಗುತ್ತಿರುವ ಸಾಮಾಜಿಕ ಸ್ಥಿತ್ಯಂತರಗಳ ಜೊತೆ ಜೊತೆಗೆ ಪರಿಷ್ಕರಣೆಗೊಳ್ಳುತ್ತಲೇ ಇರಬೇಕು ಮತ್ತು ಕಡ್ಡಾಯವಾಗಿ ಪಾಲಿಸಲೇಬೇಕು ಎಂಬುದು ಪ್ರಸಕ್ತ ಸಾಮಾಜಿಕ ಅವಶ್ಯಕತೆಯನ್ನು ಸೂಚಿಸುತ್ತದೆ.

ಕೇವಲ ಎರಡೇ ದಶಕಗಳಲ್ಲಿ ಇಡೀ ಜಗತ್ತು ಗ್ಲೋಬಲ್ ವಿಲೇಜ್ ಆಗಿ ಮಾರ್ಪಟ್ಟಿದೆ. ವಿಜ್ಞಾನ ಮತ್ತು ತಂತ್ರಜ್ಞಾನದ ಸಹಾಯದಿಂದ ಅಂಗೈಯಲ್ಲಿ ಈ ಬೃಹತ್ ಬ್ರಹ್ಮಾಂಡವನ್ನು ನೋಡಬಹುದಾಗಿದೆ... ಆದ–ರೆ ದೀಪದ ಅಡಿಯಲ್ಲಿಯೇ ಕತ್ತಲೆ ಇರುವಂತೆ ಪ್ರತಿಯೊಂದು ವೈಜ್ಞಾನಿಕ ಆವಿಷ್ಕಾರದ ಹಿಂದೆ ಕೆಲ ಕರಾಳತೆಗಳು ಅಡಗಿವೆ. 21ನೇ ಶತಮಾನದ ಆದಿಯಲ್ಲಿ ಬಂದ ಅಂತರ್ಜಾಲ ಮತ್ತು ಮಾಹಿತಿ ತಂತ್ರಜ್ಞಾನವು ಮಾಹಿತಿಯ ಜೊತೆಜೊತೆಗೆ ತಂತ್ರಜ್ಞಾನದ ಬೆಳವಣಿಗೆಯಿಂದಾಗಿ ಭರಪೂರ ಮನರಂಜನೆಯನ್ನು ಹೊತ್ತು ತಂದಿತು. ಮೊದಮೊದಲು ಮೂರ್ಖರ ಪೆಟ್ಟಿಗೆಯ ಮುಂದೆ ಕುಳಿತು ತರಹೇವಾರಿ ಧಾರಾವಾಹಿಗಳನ್ನು, ಸಿನಿಮಾಗಳನ್ನು ನೋಡುತ್ತಿದ್ದ ಜನರು ಮುಂದಿನ ಒಂದು ದಶಕದಲ್ಲಿ ಮೊಬೈಲ್ ಎಂಬ ಮಾಯಾಂಗನೆಯ ಕೈಯಲ್ಲಿ ಸಿಲುಕಿ ಇದೀಗ ವಾಟ್ಸಪ್, ಇನ್ಸ್ಟಾಗ್ರಾಂ, ಫೇಸ್ಬುಕ್, ಯೂಟ್ಯೂಬ್ ಮತ್ತಿತರ ಮಾಹಿತಿ ಜಾಲಗಳ ಬೆನ್ನತ್ತಿ ಹಿಂತಿ–ರುಗಿ ಬಾರದಷ್ಟು ದೂರ ಸಾಗಿದ್ದಾರೆ. ಕೇವಲ ಒಂದೇ ಚಾನೆಲ್ ಬರುತ್ತಿದ್ದ ಕಾಲದಲ್ಲಿ ಮನೆ ಮಂದಿಯನ್ನೆಲ್ಲ ಒಗ್ಗೂಡಿಸುತ್ತಿದ್ದ ದೂರದರ್ಶನವು ಇದೀಗ ಹಲವಾರು ಚಾನಲ್ ಗಳನ್ನು ಹೊಂದಿದ್ದು ದರ್ಶಕರಿಗೆ ಹಲವಾರು ವಿಷಯ ವೈವಿಧ್ಯಗಳನ್ನು ನೀಡುತ್ತಿರುವುದೇನೋ ನಿಜ... ಆದರೆ ಟಿ ಆರ್ ಪಿ ಯ ಬೆಂಬತ್ತಿರುವ ಟಿವಿ ಚಾನೆಲ್ ಗಳು ಒಳ್ಳೆಯ ನ್ಯೂಸ್ ಕೊಡುವ ಸ್ಕೂಪ್ ಗಿಂತ,ಹೆಚ್ಚಿನ ಟಿ ಆರ್ ಪಿ ದೊರೆಯುವ ಕಾರಣ ಸಮಾಜ ಬಾಹಿರ ಕೃತ್ಯಗಳ ದೃಶ್ಯಾವಳಿಗಳನ್ನು ಹೆಚ್ಚು ಪ್ರಸಾರ ಮಾಡುತ್ತಿದ್ದಾರೆ. ಯಾವ ವಸ್ತು, ವಿಷಯಗಳನ್ನು ನಮ್ಮ ಸಮಾಜ ಮಾತನಾಡಲು ಮಡಿವಂತಿಕೆಯನ್ನು ತೋರುತ್ತಿತ್ತೋ ಅದೇ ವಿಷಯಗಳು ಇಂದು ನಮ್ಮ ನಡುಮನೆಯಲ್ಲಿ ಹಾಡಹಗಲೇ ಬಿತ್ತರಗೊಳ್ಳುತ್ತಿವೆ. ಹಾಗೆಂದು ಅಂದು ಯಾವುದೇ ರೀತಿಯ ಅನೈತಿಕತೆ, ಭ್ರಷ್ಟಾಚಾರ ಇರಲಿಲ್ಲ ಎಂದಲ್ಲ... ಆದರೆ ಅದರ ವ್ಯಾಪಕವಾದ ಬಹಿರಂಗ ಪ್ರಚಾರ ಆಗುತ್ತಿರಲಿಲ್ಲ, ಅಷ್ಟರಮಟ್ಟಿಗೆ ಸಮಾಜದಲ್ಲಿ ಬೇಕು ಮತ್ತು ಬೇಡಗಳ ನಡುವಿನ ಸೂಕ್ಷ್ಮ ಗೆರೆ ಇದ್ದು ಅದನ್ನು ಎಲ್ಲರೂ ಪಾಲಿಸುತ್ತಿದ್ದರು.

ಬದಲಾದ ಈ ಎರಡು ದಶಕಗಳ ಪರಿಣಾಮವಾಗಿ ಇಂದಿನ ಮಕ್ಕಳು ನಮ್ಮ ಭಾರತೀಯ ಸಭ್ಯತೆಯಲ್ಲಿ ಹಾಸು ಹೊಕ್ಕಾಗಿರುವ ಸಂಸ್ಕಾರಗಳನ್ನು ಮರೆತಿದ್ದಾರೆ ಎಂದರೆ ತಪ್ಪಿಲ್ಲ. 12ನೇ ಶತಮಾನದಲ್ಲಿ ನಮ್ಮ ವಚನಕಾರರು ಹೇಳಿರುವ ಗುರು ಹಿರಿಯರಲ್ಲಿ ವಿನಯ ವಿಧೇಯತೆ ಇರಬೇಕು, ಪ್ರೀತಿ ವಿಶ್ವಾಸ ಬದುಕಿನ ಮೂಲ ಮಂತ್ರವಾಗಬೇಕು, ಪರಸ್ತ್ರೀ,ಪರಧನಗಳತ್ತ ಕಣ್ಣೆತ್ತಿಯೂ ನೋಡಬಾರದು ಎಂಬ ನಮ್ಮ ಸಂಸ್ಕೃತಿಯ ಮೂಲ ಬೇರುಗಳು ಅಲುಗಾಡುತ್ತಿವೆ.




ಇದೆಲ್ಲಕ್ಕೂ ಕಾರಣ ನಮ್ಮ ವಿಸ್ಮೃತಿ.... ನಮ್ಮ ಮಕ್ಕಳು ನಮ್ಮ ಸಂಸ್ಕೃತಿ ಆಚಾರ ವಿಚಾರ ಮತ್ತು ಮಾನವೀಯ ಸಭ್ಯತೆಗಳನ್ನು ಮರೆತು ಸಾಮಾಜಿಕ ಬದುಕನ್ನು ದೂರವಾಗಿಸಿಕೊಂಡು ಕೂಪ ಮಂಡೂಕವಾಗಿ ಬದುಕುತ್ತಿದ್ದಾರೆ. ಆದರೆ ಅವರ ಅರಿವಿಗೆ ಬಾರದೆ ಇರುವ ಒಂದು ವಿಷಯವಿದೆ... ಮನುಷ್ಯ ಸಮಾಜ ಜೀವಿ. ಯಾರೂ ತಮ್ಮ ಹೆಣವನ್ನು ತಾವೇ ಹೊರಲು ಸಾಧ್ಯವಿಲ್ಲ. ನಮ್ಮ ಬದುಕು ಸುಸೂತ್ರವಾಗಿ ಸಾಗಲು ನಮಗೆ ಸಾಮಾಜಿಕ ಜೀವನ ಅತ್ಯಗತ್ಯ. ಅಂತೆಯೇ ಕೆಲ ಸಮಾಜಿಕ ನಿಯಮಾವಳಿಗಳನ್ನು ಮರುರೂಪಿಸುವ ಅವಶ್ಯಕತೆಯೂ ಇದೆ. ಅಂತಹ ಕೆಲವು ನಿಯಮಾವಳಿಗಳು ಹೀಗಿವೆ

* ಒಂದು ಚಿಕ್ಕ ಪೆನ್ನು, ಪುಸ್ತಕ, ಚಾರ್ಜರ್ ನಿಂದ ಹಿಡಿದು ಯಾವುದೇ ವಸ್ತು ಇಲ್ಲವೇ ಹಣವನ್ನು ಬೇರೊಬ್ಬರಿಂದ ಪಡೆದುಕೊಂಡಿದ್ದರೆ ಅವರಿಗೆ ಕೊಡುತ್ತೇನೆ ಎಂದು ವಾಗ್ದಾನ ಮಾಡಿದ ಸಮಯಕ್ಕಿಂತ ಮುಂಚೆಯೇ ಅದನ್ನು ಹಿಂದಿರುಗಿಸಿ.

*ಬೇರೆಯವರು ನಿಮಗೆ ಆತಿಥ್ಯ ನೀಡುವಾಗ ದುಬಾರಿಯಾದ ಆಹಾರವನ್ನು ಆರ್ಡರ್ ಮಾಡಬೇಡಿ.

* ನಿಮ್ಮ ಎದುರಿಗಿರುವ ವ್ಯಕ್ತಿಯನ್ನು ಅವರ ಸಂಬಳ, ಅವರ ಮದುವೆ, ಅವರ ಪ್ರೀತಿ ಪ್ರೇಮದ ಬದುಕಿನ ಕುರಿತು, ಮಕ್ಕಳಾಗಿಲ್ಲವೇ ಎಂದು, ಅವರ ಆಸ್ತಿ ಅಂತಸ್ತುಗಳ ಕುರಿತಾಗಿ ಎಂದೂ ಏನನ್ನು ಕೇಳಬಾರದು. ಅವರಿನ್ನೂ ಮನೆ ಖರೀದಿಸಿಲ್ಲವೇ,

ಕಾರು ತೆಗೆದುಕೊಂಡಿಲ್ಲವೇ ಎಂಬ ಕುತೂಹಲದ ಪ್ರಶ್ನೆಗಳು ಖಂಡಿತ ಬೇಡ!

*ಯಾರನ್ನು ಕಡೆಗಣಿಸಬೇಡಿ, ಒಬ್ಬ ವ್ಯಕ್ತಿಯ ಘನತೆ ಆತನ ಜಾತಿ, ಮತ, ಪಂಥ ಮತ್ತು ಸಾಮಾಜಿಕ ಅಂತಸ್ತುಗಳಿಂದ ಬರುವುದಿಲ್ಲ ಬದಲಾಗಿ ನಿಮ್ಮ ಎದುರಿಗಿರುವವರ ಜೊತೆಯಲ್ಲಿ ನೀವು ನಡೆದುಕೊಳ್ಳುವ ರೀತಿಯಲ್ಲಿ ಕಂಡು ಬರುತ್ತದೆ. ಹೆಣ್ಣು ಮಕ್ಕಳನ್ನು ಗೌರವದಿಂದ ಕಾಣಿ.

*ಯಾವುದಾದರೂ ಹೋಟೆಲಿಗೆ ಹೋದರೆ ಅಥವಾ ಒಂದೇ ಗಾಡಿಯನ್ನು ಸ್ನೇಹಿತರ ಜೊತೆ ಹೋಗುವಾಗ ಬಾಡಿಗೆಗೆ ಪಡೆದರೆ ಒಂದೊಮ್ಮೆ ಅವರು ಬಾಡಿಗೆ ಕಟ್ಟಿದರೆ ಮತ್ತೊಮ್ಮೆ ನೀವು ಕಡ್ಡಾಯವಾಗಿ ಕಟ್ಟಲೇಬೇಕು ಎಂಬುದನ್ನು ಮರೆಯಬೇಡಿ.

*ಯಾವಾಗಲೂ ನಿಮ್ಮ ಅಭಿಪ್ರಾಯಕ್ಕೆ ಮನ್ನಣೆ ಸಿಗಬೇಕೆಂಬ ಹಠ ಬೇಡ, ಬೇರೆಯವರ ಅಭಿಪ್ರಾಯಕ್ಕೂ ಬೆಲೆ ಕೊಡಿ. ನಾನು ಮಾತ್ರ ಸರಿ ಎಂಬುದು ಖಂಡಿತವಾಗಿಯೂ ತಪ್ಪು.

*ಇಬ್ಬರೂ ವ್ಯಕ್ತಿಗಳ ನಡುವಣ ಮಾತುಕತೆಯ ಮಧ್ಯದಲ್ಲಿ ಬಾಯಿ, ಮೂಗು ತೂರಿಸಬೇಡಿ. ಮೊದಲು ಅವರನ್ನು ಮಾತನಾಡಲು ಬಿಡಿ ನಂತರ ನಿಮಗೆ ಅವಶ್ಯವಾದುದನ್ನು ಮಾತ್ರವೇ ಆಯ್ದುಕೊಳ್ಳಿ.

*ವಿನಾಕಾರಣ ಯಾರನ್ನು ಹೊಗಳುವುದು ಇಲ್ಲವೇ ತೆಗಳುವುದನ್ನು ಮಾಡಬೇಡಿ. ಸಮಯ ಪ್ರಜ್ಞೆ ತುಂಬಾ ಮುಖ್ಯ. ಅಷ್ಟಾಗಿಯೂ ಅವಶ್ಯಕತೆಯೆನಿಸಿದರೆ ಸಾರ್ವಜನಿಕವಾಗಿ ಹೊಗಳಿ ಮತ್ತು ಖಾಸಗಿಯಾಗಿ ತಿದ್ದಿಕೊಳ್ಳಲು ಹೇಳಿ.

ನಿಮಗೆ ಉಪಕಾರ ಮಾಡಿದವರಿಗೆ ಧನ್ಯವಾದಗಳನ್ನು ಸಲ್ಲಿಸಲು ಮರೆಯಬೇಡಿ.

*ಬೇರೆಯವರ ದೇಹದ ಬಣ್ಣ, ಗಾತ್ರ ಮತ್ತು ಮಾತುಗಾರಿಕೆಯ ಕುರಿತು ನಿಮ್ಮ ಅನಿಸಿಕೆಯನ್ನು ಹೇಳಲೇಬೇಡಿ. ಈಗಾಗಲೇ ಜನ–ರಿಂದ ಸಾಕಷ್ಟು ಕಮೆಂಟ್ಗಳನ್ನು ಪಡೆದಿರುವ ಅವರಿಗೆ ನಿಮ್ಮ ಮಾತುಗಳಿಂದ ಬೇಸರವಾಗಬಹುದು. ಬೇರೆಯವರನ್ನು ಮುಜುಗರಗೊಳಿಸುವಂತಹ ಪ್ರಶ್ನೆಗಳನ್ನು ಕೇಳಬೇಡಿ.

*ಒಂದು ಕಂಪನಿಯ ಮುಖ್ಯಸ್ಥನಿಗೆ ಕೊಡುವ ಮರ್ಯಾದೆಯನ್ನು ಆ ಕಂಪನಿಯ ಕಸ ಗುಡಿಸುವ ವ್ಯಕ್ತಿಗೂ ಕೊಡಿ. ದೊಡ್ಡವರನ್ನು ನೀವು ಗೌರವಿಸುವುದನ್ನು ಬೇರೆಯವರು ಗುರುತಿಸುತ್ತಾರೋ ಇಲ್ಲವೋ ಗೊತ್ತಿಲ್ಲ ಆದರೆ ನಿಮಗಿಂತ ಕಡಿಮೆ ಇರುವ ಜನರನ್ನು ನೀವು ನಿಜವಾಗಿಯೂ ಗೌರವಿಸುವುದು ನಿಮ್ಮ ವ್ಯಕ್ತಿತ್ವದ ವೈಶಿಷ್ಟತೆಗೆ ಕಾರಣವಾಗುತ್ತದೆ.

* ಅವರಾಗಿ ಕೇಳದ ಹೊರತು ಯಾರಿಗೂ ಸಲಹೆ ಸೂಚನೆಗಳನ್ನು ಕೊಡಬೇಡಿ. ನಿಮ್ಮನ್ನು ನೀವು ಅವರಾಗಿ ಹೇಳದ ಹೊರತು ಮತ್ತೊಬ್ಬರ ಯಾವುದೇ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಡಿ.

*ಬೆಳಕಿನಲ್ಲಿ ನೀವು ಬೇರೆಯವರೊಂದಿಗೆ ಮಾತನಾಡುವಾಗ ನೀವು ಧರಿಸಿರುವ ತಂಪು ಕನ್ನಡಕವನ್ನು ತೆಗೆದಿಡಿ. ಅದು ನಿಮ್ಮ ಎದುರಿಗಿನವ–ರಿಗೆ ನೀವು ಕೊಡುವ ಗೌರವ. ಅದೂ ಅಲ್ಲದೆ ಸಂವಹನಕ್ಕೆ ಮುಖ್ಯವಾಗಿ ಬೇಕಾಗಿರುವುದು ಪರಸ್ಪರ ಕಣ್ಣೋಟಗಳ ವಿನಿಮಯ.

*ಬೇರೆಯವರ ಮುಂದೆ ನಿಮ್ಮ ಶ್ರೀಮಂತಿಕೆಯನ್ನಾಗಲಿ, ನಿಮ್ಮ ಜಾಣ್ಮೆಯನ್ನಾಗಲಿ ತೋರಗೊಡಬೇಡಿ.


* ಸಮಾಜದಲ್ಲಿ ಗಣ್ಯ ವ್ಯಕ್ತಿಗಳೆನಿಸಿಕೊಂಡಿರುವವರ ಪರಿಚಯ ನಿಮಗಿದೆ ಎಂದು ಅದನ್ನು ಬೇರೆಡೆ ದುರ್ಬಳಕೆ ಮಾಡುವ, ಅವರ ಹೆಸರನ್ನು ಬಳಸಿಕೊಂಡು ನಿಮ್ಮ ಬೇಳೆ ಬೇಯಿಸಿಕೊಳ್ಳುವ ಪ್ರಯತ್ನ ಖಂಡಿತ ಸಲ್ಲದು.

ಇನ್ನು ಮೊಬೈಲ್ ಎಂಬ ಮಾಯಾಂಗನೆ ನಮ್ಮೆಲ್ಲರ ಜೀವನದಲ್ಲಿ ಅತಿ ಹೆಚ್ಚಿನ ಖಾಸಗಿ–ತನವನ್ನು ತಂದಿದ್ದಾಳೆ. ಮೊಬೈಲ್ ಬಳಸುವಾಗ ಕೂಡ ನಾವು ಹಲವಾರು ನಿಯಮಾವಳಿಗಳನ್ನು ಹಾಕಿಕೊಳ್ಳಬೇಕು.

* ಅವಶ್ಯಕತೆ ಇಲ್ಲದ ಹೊರತು ಪದೇ ಪದೇ ಯಾರಿಗೂ ಫೋನ್ ಮಾಡಬೇಡಿ. ಎರಡಕ್ಕಿಂತ ಹೆಚ್ಚು ಬಾರಿ ಒಬ್ಬ ವ್ಯಕ್ತಿ ನಿಮ್ಮ ಫೋನ ಕರೆಯನ್ನು ಎತ್ತುವುದಿಲ್ಲ ಎಂದರೆ ಅವರು ನಿಮ್ಮನ್ನು ನಿರ್ಲಕ್ಷಿಸುತ್ತಿದ್ದಾರೆ ಎನ್ನುವುದಕ್ಕಿಂತ ಅವರು ನಿಮ್ಮ ಕರೆಗಿಂತ ಮುಖ್ಯವಾದ ವಿಷಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದರ್ಥ.

*ಯಾರಾದರೂ ತಮ್ಮ ಮೊಬೈಲ್ನಲ್ಲಿ ಯಾವುದಾದರೂ ಫೋಟೋ ಮತ್ತಿತರ ವಿಷಯವನ್ನು ತೋರಿಸುತ್ತಿದ್ದರೆ ಕೇವಲ ಆ ಚಿತ್ರವನ್ನು ಮಾತ್ರ ನೋಡಿ.... ಮೊಬೈಲನ ಪರದೆಯ ಮೇಲೆ ಅತ್ತಿತ್ತ ಕೈ ಆಡಿಸಿ ಬೇರೆ ಚಿತ್ರಗಳನ್ನು ನೋಡುವ ಪ್ರಯತ್ನ ಬೇಡ.

*ಅದಷ್ಟೇ ಸಾಮಾಜಿಕವಾಗಿ ನಾವು ಮುಂದುವರೆದಿದ್ದರೂ ಮತ್ತೊಬ್ಬರಿಗೆ ಅವಶ್ಯಕತೆ ಇಲ್ಲದ ಹೊರತು ಕರೆ ಇಲ್ಲವೇ ಮೆಸೇಜ್ ಮಾಡಬಾರದು ಅದು ರಾತ್ರಿ 10 ರ ನಂತರ ಮತ್ತು ಇಳಿ ಮಧ್ಯಾಹ್ನದ ಸಮಯಗಳಲ್ಲಿ. ನಿಮ್ಮ ಒಂದು ಫೋನ್ ಕರೆ ಇಲ್ಲವೇ ಮೆಸೇಜ್ ಎದುರಿಗಿನ ವ್ಯಕ್ತಿಯ ವೈಯಕ್ತಿಕತೆಗೆ ಧಕ್ಕೆ ತರಬಾರದು. ಮನುಷ್ಯನಲ್ಲಿರುವ ಸೈತಾನಕೆಯ ಗುಣಲಕ್ಷಣಗಳು ಕೆರಳುವುದು ಅಂತಹ ಸಮಯದಲ್ಲಿಯೇ. ವಿರುದ್ಧ ಲಿಂಗಿಗಳ ಜೊತೆ ಮಾತನಾಡುವಾಗಲಂತೂ ನಿಮ್ಮ ಭಾಷೆಯ ಮೇಲೆ ಹಿಡಿತವಿರಲಿ. ಸಂದೇಶದಲ್ಲಿ ನೀವು ಕಳುಹಿಸುವ ಎಮೋಜಿಗಳು ಬೇರೆಯವ–ರಿಗೆ ತಪ್ಪು ಅರ್ಥವನ್ನು ಕಲ್ಪಿಸಿ ಕೊಡಬಾರದು. ನಿಮ್ಮ ಉದ್ದೇಶಗಳು ಒಳ್ಳೆಯವಾಗಿದ್ದರೆ ಸಾಲದು ಅದನ್ನು ಪ್ರತಿಪಾದಿಸುವಂತೆಯೂ ಇರಬೇಕು. ( ಇಂದು ಬಹಳಷ್ಟು ಜನರು ತಮ್ಮ ಕೌಟುಂಬಿಕ ನೆಮ್ಮದಿಯನ್ನು ಕಳೆದುಕೊಂಡಿರುವುದು ಇಂತಹ ತಪ್ಪುಗಳಿಂದಲೇ)



ಇತ್ತೀಚೆಗಿನ ಮತ್ತೊಂದು ಬೆಳವಣಿಗೆ ಎಂದರೆ ಬೇರೆಯವರು ನಿಮ್ಮೊಂದಿಗೆ ಖಾಸಗಿಯಾಗಿ ಮಾತನಾಡಿದಾಗ ಕಾಲ್ ರೆಕಾರ್ಡ್ ಮಾಡಿಕೊಳ್ಳುವುದು..... ಇದಂತೂ ಅಕ್ಷಮ್ಯ ಅಪರಾಧ. ಕೆಲವು ಬಾರಿ ಇದು ಅನುಕೂಲಕರ ವಾದರೂ ನಮ್ಮೊಂದಿಗೆ ಮಾತನಾಡುತ್ತಿರುವ ವ್ಯಕ್ತಿಯ ಕುರಿತ ನಮ್ಮ ನಂಬಿಕೆಯನ್ನು ಪ್ರಶ್ನಿಸುತ್ತದೆ. ಏನನ್ನೋ ಸಾಬೀತುಪಡಿಸುವ ಹುಚ್ಚಿನಲ್ಲಿ ನಾವು ಬಹಳಷ್ಟನ್ನು ಕಳೆದುಕೊಳ್ಳುತ್ತೇವೆ.

ಅತಿಯಾದ ಖಾಸಗಿತನ ತಪ್ಪು ದಾರಿಗೆ ಎಡೆ ಮಾಡಿಕೊಡುತ್ತದೆ, ಅದರಲ್ಲೂ ಕುಟುಂಬದ ಇತರ ಸದಸ್ಯರ ಮುಂದೆಯೂ ಖಾಸಗಿತನ ಇರುವುದು ಪರಸ್ಪರ ಅಪನಂಬಿಕೆಗೆ, ಅನುಮಾನಕ್ಕೆ ಕಾರಣವಾಗುತ್ತದೆ. ಕೊನೆಯವರೆಗೂ ನೀವು ಜೀವಿಸಬೇಕಾಗಿರುವುದು ನಿಮ್ಮವರೊಂದಿಗೆ...

ನಮಗಿರುವುದು ಒಂದೇ ಜೀವನ... ಆ ಜೀವನವನ್ನು ಘನತೆ ಗೌರವದಿಂದ ಬದುಕಿ ಬಾಳಲು ಸಾಮಾಜಿಕ ಅಂಕುಶ ಬೇಕೇ ಬೇಕು. ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಂಡಿರುವ ನಾವುಗಳು ಸಮಾಜದ ಹಂಗು ನಮಗಿಲ್ಲ ಎಂಬಂತೆ ವರ್ತಿಸಲೇ ಬಾರದು. ಈ ಸಮಾಜ ನಮ್ಮನ್ನು ಗುರುತಿಸುವುದು ನಾವು ಇಂಥವರ ಮನೆಯ ಮಕ್ಕಳು, ಸೊಸೆ, ಮೊಮ್ಮಕ್ಕಳು ಎಂಬ ಕೌಟುಂಬಿಕ ಪರಿಚಯದಿಂದಲೇ ಹೊರತು ನಾವು ಗಳಿಸಿರುವ ಓದು ವಿದ್ಯೆ ಐಶ್ವರ್ಯ ಗಳಿಂದಲ್ಲ.

ಅಂತಿಮವಾಗಿ ಸಾಮಾಜಿಕ ಶಿಶುಗಳು ನಾವು... ಸಾಮಾಜಿಕ ನೀತಿ ನಿಯಮಾವಳಿಗಳನ್ನು ಪಾಲಿಸುತ್ತಾ ನಮ್ಮ ವೈಯಕ್ತಿಕ ಬೆಳವಣಿಗೆಯ ಜೊತೆ ಜೊತೆಗೆ ಉತ್ತಮ ಸಾಮಾಜಿ–ಕ ಬೆಳವಣಿಗೆಗೆ ನಮ್ಮ ಅಳಿಲು ಸೇವೆಯನ್ನು ಸಲ್ಲಿಸೋಣ.

# ಪ್ರಾಂಶುಪಾಲರು ಹೊಸ ಕೌಶಲಗಳನ್ನು ಅಳವಡಿಸಿಕೊಳ್ಳಬೇಕು :ಪ್ರೊ.ತ್ಯಾಗರಾಜ

**ಉದಯರಶ್ಮಿ ನ್ಯೂಸ್**



ವಿಜಯಪುರ: ಮಹಾವಿದ್ಯಾಲಯದ ಪ್ರಾಂಶುಪಾಲರುಗಳು ಕಲಿಕೆಯಲ್ಲಿ ತಮ್ಮ ಮಹಾವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ಭವಿಷ್ಯಕ್ಕೆ ಉಪಯುಕ್ತವಾಗುವಂತಹ, ಹೊಸ ಹೊಸ ಕೌಶಲ್ಯ ಅಭಿವೃದ್ಧಿಗಳ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡು ವಿದ್ಯಾರ್ಥಿಗಳಿಗೆ ಸಲಹೆ ಮಾರ್ಗದರ್ಶನ ನೀಡಬೇಕು ಎಂದು ರಾಣಿಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿಯ ಕುಲಪತಿಗಳಾದ ಪ್ರೊ. ಸಿ. ಎಂ. ತ್ಯಾಗರಾಜ ಹೇಳಿದರು.

ಅವರು ಗುರುವಾರ ಹಾಗೂ ಬಿ.ಎಲ್.ಡಿ.ಇ ಸಂಸ್ಥೆಯ ಆವರಣದಲ್ಲಿರುವ ಡಾ.ಫ.ಗು. ಹಳಕಟ್ಟಿ ಇಂಜನೀಯರಿಂಗ್ ಮಹಾವಿದ್ಯಾಲಯದ ಸಭಾಂಗಣದಲಿ "Navigating Youth Towards AmruthaKal: Knowledge Transfer Through Technology and Skill Development" ಎಂಬ ವಿಷಯದ ಕುರಿತ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಕುಲಸಚಿವರಾದ ರಾಜಶ್ರೀ ಜೈನಾಪೂರ ಮಾತನಾಡಿ, ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಹೆಚ್ಚನ ಅಂಕ ಗಳಿಸುವದಕ್ಕಿಂತಲೂ ತಮ್ಮ ಜೀವನಕ್ಕೆ ಉಪಯುಕ್ತವಾಗುವ ಕೌಶಲಗಳನ್ನು ಕಲಿಯಲು ಪ್ರಯತ್ನಿಸಬೇಕು ಎಂದು ಹೇಳಿದರು.

ಈ ಕಾರ್ಯಾಗಾರದಲ್ಲಿ ಮೂರು ಗೋಷ್ಠಿಗಳನ್ನು ಹಮ್ಮಿಕೊಳ್ಳಲಾಗಿತ್ತು. ಮೊದಲನೇ ಗೋಷ್ಠಿಯನ್ನು ಶ್ರೀನಿವಾಸ ಪಿ, ಅವರು "RevolutionisingArtificalInteligence in Knowledge Transfer" ಎಂಬ ವಿಷಯದ ಬಗ್ಗೆ, ಎರಡನೇ ಗೋಷ್ಠಿಯನ್ನು ಐಐಟಿ ದೆಹಲಿಯ ಡಿಎಸ್. ಮಂಜುನಾಥ ಅವರು "ToC Critical Chain-Theory of Constriants Tools Industry 4.0 ∑Innovation" ಎಂಬ ವಿಷಯದ ಕುರಿತು, ಮೂರನೇಯ ಗೋಷ್ಠಿಯನ್ನು ಆರ್ ಕೆ ಇಂಡಸ್ಟ್ರೀಸ್‌ನ ನಿರ್ದೇಶಕರಾದ ಸೂರಜ ನಾಡಿಗ "Empowering Institutions through Skill Development and Entrepreneurship" ಎಂಬ ವಿಷಯದ ಕುರಿತು ಉಪನ್ಯಾನ ನೀಡಿದರು.

ಉಪ ಕುಲಸಚಿವರಾದ ಡಾ.ಡಿ. ಕೆ ಕಾಂಬಳೆ, ಬಿಎಲ್‌ಡಿಇ ಸಂಸ್ಥೆಯ ಪ್ರಾಂಶುಪಾಲ ವಿ. ಜಿ ಸಂಗಮ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಪ್ರೊ.ಎಸ್ ಎಂ. ಗಂಗಾಧರಯ್ಯ ಸ್ವಾಗತಿಸಿದರು. ಸ್ನಾತಕೋತ್ತರಕೇಂದ್ರ ವಿಜಯಪುರದ ನಿರ್ದೇಶಕರಾದ ಡಾ.ದಯಾನಂದ ಸಾವಕಾರ, ವಂದಿಸಿದರು. ಡಾ.ಪೂರ್ಣಿಮಾ ದಾಮನ್ನವರ ಹಾಗೂ ಡಾ.ರೂಪಾ ಇಂಗಳೆ ಕಾರ್ಯಕ್ರಮವನ್ನು ನಿರೂಪಿಸಿದರು. ಕುಮಾರಿ. ವೈಷ್ಣವಿ ನಾಗರಾಳ ಹಾಗೂ ಶ್ರೀರಕ್ಷಾ ಕುಲಕರ್ಣಿ ಗೋಷ್ಠಿಗಳನ್ನು ನಿರ್ವಹಿಸಿದರು.

# ವಿಜಯಪುರ ಜಿಲ್ಲೆಯಲ್ಲಿ 2024–25ನೇ ಸಾಲಿನಲ್ಲಿ 40 ಬಾಲ್ಯವಿವಾಹ ತಡೆ

# ಬಾಲ್ಯವಿವಾಹ ತಡೆಗೆ ಕಟ್ಟುನಿಟ್ಟು ಕ್ರಮ:ಡಿಸಿ ಟಿ.ಭೂಬಾಲನ್

**ಉದಯರಶ್ಮಿ ನ್ಯೂಸ್**



ವಿಜಯಪುರ: ಬಾಲ್ಯವಿವಾಹಕ್ಕೆ ಪ್ರೋತ್ಸಾಹ ನೀಡುವುದು ಹಾಗೂ ಅದರ ಆಚರಣೆಗೆ ಒಪ್ಪಿಗೆ ನೀಡಿದರೆ ಬಾಲ್ಯ ವಿವಾಹ ನಿಷೇಧ ಕಾಯ್ದೆ–2006ರ ಕಲಂ 9, 10 ಹಾಗೂ 11ರ ಪ್ರಕಾರ ಎರಡು ವರ್ಷಗಳ ಕಾಲ ವಿಸ್ತರಿಸಬಹುದಾದ ಕಠಿಣ ಕಾರಾಗೃಹ ಶಿಕ್ಷೆ ಮತ್ತು ಒಂದು ಲಕ್ಷ ರೂಗಳವರೆಗೂ ವಿಸ್ತರಿಸಬಹುದಾದ ದಂಡವಿರುತ್ತದೆ ಎಂದು ಜಿಲ್ಲಾ ಮಕ್ಕಳ ರಕ್ಷಣ ಘಟಕದ ಅಧ್ಯಕ್ಷರು ಆದ ಜಿಲ್ಲಾಧಿಕಾರಿ ಟಿ.ಭೂಬಾಲನ್ ತಿಳಿಸಿದ್ದಾರೆ.

ಬಾಲ್ಯ ವಿವಾಹ ಒಂದು ಸಾಮಾಜಿಕ ಪಿಡುಗು ಆಗಿದ್ದು, ಬಾಲ್ಯವಿವಾಹ ತಡೆಗಟ್ಟುವ ನಿಟ್ಟಿನಲ್ಲಿ ಜಿಲ್ಲಾ, ತಾಲೂಕು ಹಾಗೂ ಗ್ರಾಮ ಮಟ್ಟದ ಅಧಿಕಾರಿಗಳಿಗೆ ಬಾಲ್ಯವಿವಾಹ ನಿಷೇಧ ಕಾಯ್ದೆ ಕುರಿತು ತರಬೇತಿಯನ್ನು ನೀಡಲಾಗಿದೆ. ಅದಲ್ಲದೇ ಜಾಥಾ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗಿದೆ. ಅದರ ಪ್ರತಿಫಲ ವಿಜಯಪುರ ಜಿಲ್ಲೆಯಲ್ಲಿ 2023–24ನೇ ಸಾಲಿನಲ್ಲಿ ಒಟ್ಟು 140 ದೂರುಗಳು ಮಕ್ಕಳ ಸಹಾಯವಾಣಿ–1098/112 ಸ್ವೀಕರಿಸಿದ್ದು, ಅದರಲ್ಲಿ 125 ಬಾಲ್ಯವಿವಾಹಗಳನ್ನು ಸಂಬಂಧಪಟ್ಟ ಎಲ್ಲ ಬಾಲ್ಯವಿವಾಹ ನಿಷೇಧಾಧಿಕಾರಿಗಳ ಸಹಯೋಗದೊಂದಿಗೆ ತಡೆಗಟ್ಟಿದ್ದು, 09 ಬಾಲ್ಯವಿವಾಹ ಪ್ರಕರಣಗಳಲ್ಲಿ ಎಫ್.ಐ.ಆರ್ ದಾಖಲಿಸಲಾಗಿದೆ. ಉಳಿದ 06 ಪ್ರಕರಣಗಳು ಬೇರೆ ಬೇರೆ ಜಿಲ್ಲೆಗಳಿಗೆ ವರ್ಗಾವಣೆ ಮಾಡಲಾಗಿದೆ.

ಅದರಂತೆ 2024–25ನೇ ಸಾಲಿನಲ್ಲಿ ಒಟ್ಟು 40 ದೂರುಗಳು ಮಕ್ಕಳ ಸಹಾಯವಾಣಿ–1098/112 ಸ್ವೀಕರಿಸಿದ್ದು, ಅದರಲ್ಲಿ 40 ಬಾಲ್ಯವಿವಾಹಗಳನ್ನು ಸಂಬಂಧಪಟ್ಟ ಎಲ್ಲ ಬಾಲ್ಯವಿವಾಹ ನಿಷೇಧಾಧಿಕಾರಿಗಳ ಸಹಯೋಗದೊಂದಿಗೆ ತಡೆಗಟ್ಟಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಯಾರಾದರೂ ಬಾಲ್ಯವಿವಾಹವನ್ನು ನೆರವೇರಿಸಿದ್ದು, ನಿರ್ದೇಶಿಸಿದ್ದು ಅಥವಾ ನೆರವು ನೀಡಿದ್ದೇ ಆದಲ್ಲಿ ಅವರು ಅದು ಬಾಲ್ಯವಿವಾಹ ಅಲ್ಲವೆಂದು ನಿರೂಪಿಸಲು ಸಾಕಷ್ಟು ಪುರಾವೆಗಳನ್ನು ಒದಗಿಸದಿದ್ದಲ್ಲಿ ಹಾಗೂ ಯಾವುದೇ ಮಗು ಬಾಲ್ಯವಿವಾಹಕ್ಕೆ ಒಳಗಾದರೆ, ಮಗು ಸುಪರ್ಧಿಯಲ್ಲಿರುವ ವ್ಯಕ್ತಿ, ಸಂಸ್ಥೆ ಅಥವಾ ಸಂಘಗಳ ಸದಸ್ಯರೂ ಸೇರಿದಂತೆ ತಂದೆ ತಾಯಿ ಮತ್ತು ಪೋಷಕರು ಅಥವಾ ಯಾವುದೇ ವ್ಯಕ್ತಿ ಯ ವಿರುದ್ಧ ಕಟ್ಟುನಿಟ್ಟಾಗಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಕಾರಣ 18 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಹಾಗೂ 21 ವರ್ಷದೊಳಗಿನ ಗಂಡು ಮಕ್ಕಳಿಗೆ ವಿವಾಹ ಮಾಡದಂತೆ ಸಾರ್ವಜನಿಕರಲ್ಲಿ ಈ ಮೂಲಕ ತಿಳಿಸಿದೆ. ಇನ್ನೂ ಸಾರ್ವಜನಿಕರಲ್ಲಿ ಬಾಲ್ಯವಿವಾಹ ನಿಷೇಧ ಕುರಿತು ಅರಿವು ಮೂಡಿಸುವುದರೊಂದಿಗೆ ಬಾಲ್ಯವಿವಾಹ ಮುಕ್ತ ಜಿಲ್ಲೆಯನ್ನಾಗಿ ಮಾಡಲು ಎಲ್ಲ ಸಂಬಂಧಪಟ್ಟ ಇಲಾಖೆಯ ಬಾಲ್ಯವಿವಾಹ ನಿಷೇಧಾಧಿಕಾರಿಗಳು ಕ್ರಮ ವಹಿಸಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

# ವಿದ್ಯಾರ್ಥಿಗಳ ಸಾಧನೆಗೆ ಬೆನ್ನೆಲುಬಾದ ಪ್ರಕಾಶ ಚೌಧರಿ :ಸಾಲಿ

**ಉದಯರಶ್ಮಿ ನ್ಯೂಸ್**



ಸಿಂದಗಿ: 2023–24ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ 1 ಫಲಿತಾಂಶದಲ್ಲಿ ಪಟ್ಟಣದ ಆಕ್ಸಫರ್ಡ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿನಿ ಪವಿತ್ರಾ ದೇವರಮನಿ 618 ಅಂಕಗಳನ್ನು ಪಡೆದು ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದು ಹೆಮ್ಮೆಯ ವಿಷಯ ಎಂದು ಇಂಡಿ ಪಟ್ಟಣದ ಆರ್‌ಎಂಎಸ್ ಶಾಲೆಯ ಶಿಕ್ಷಕಿ ಸುನಿತಾ ಸಾಲಿ ವಿದ್ಯಾರ್ಥಿಗಳ ಸಾಧನೆಯನ್ನು ಪ್ರಶಂಸಿಸಿದರು.

ಪಟ್ಟಣದ ಶ್ರೀವೇಂಕಟೇಶ್ವರ ವಿದ್ಯಾವರ್ಧಕ ಸಂಘದ ಆಕ್ಸಫರ್ಡ ಆಂಗ್ಲ ಮಾಧ್ಯಮ ಪ್ರೌಢಶಾಲೆ ಮತ್ತು ಶ್ರೀ ಎಚ್.ಟಿ.ಕೆ.(ಚೌಧರಿ) ಕನ್ನಡ ಮಾಧ್ಯಮ ಪ್ರೌಢಶಾಲೆಯ ಆವರಣದಲ್ಲಿ 2023–24ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ 1ರಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಗ್ರಾಮೀಣ ಪ್ರದೇಶದಲ್ಲಿಯೂ ಪ್ರತಿಭಾವಂತ ವಿದ್ಯಾರ್ಥಿಗಳಿದ್ದಾರೆ. ಅವರಿಗೆ ಸೂಕ್ತ ಮಾರ್ಗದರ್ಶನ, ಕಲಿಕೆ ಮತ್ತು ಪ್ರೋತ್ಸಾಹ ಅಗತ್ಯ. ಈ ನಿಟ್ಟಿನಲ್ಲಿ ಪ್ರಕಾಶ ಚೌಧರಿ ಅವರು ಆಕ್ಷಫರ್ಡ ಆಂಗ್ಲ ಮಾಧ್ಯಮ ಪ್ರೌಢಶಾಲೆ ಮತ್ತು ಶ್ರೀ ಎಚ್.ಟಿ.ಕೆ. (ಚೌಧರಿ) ಕನ್ನಡ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಉತ್ತಮ ಬೋಧನೆ ಮತ್ತು ಶೈಕ್ಷಣಿಕ ಮಾರ್ಗದರ್ಶನ ನೀಡುವ ಮೂಲಕ ಅವರು ವಿದ್ಯಾರ್ಥಿಗಳ ಸಾಧನೆಗೆ ಬೆನ್ನೆಲುಬಾಗಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದ ಆಕ್ಷಫರ್ಡ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿನಿ ಪವಿತ್ರಾ ದೇವರಮನಿ ಹಾಗೂ ಉತ್ತಮ ಸಾಧನೆ ಮಾಡಿದ ರಾಧಿಕಾ ಕಣಮೇಶ್ವರ, ಮೇಘಾ ಕುಂಬಾರ, ಅಕ್ಷಯ ತಾಳಿಕೋಟಿ, ಭುವನೇಶ್ವರಿ ಗೋನಾಳ, ಪ್ರಶಾಂತ ಬಿರಾದಾರ, ವೈಶಾಲಿ ಮಳಲಿ, ಗೌತಮ ಬಡಿಗೇರ, ಪ್ರಜ್ವಲ್ ಬಡಿಗೇರ ಮತ್ತು ಶ್ರೀ ಎಚ್.ಟಿ.ಕೆ. (ಚೌಧರಿ) ಕನ್ನಡ ಮಾಧ್ಯಮ ಪ್ರೌಢಶಾಲೆಯ ಗಂಗಮ್ಮ ಬಿರಾದಾರ, ಪವಿತ್ರಾ ಅರಳಗುಂಡಗಿ, ಭಾಗ್ಯಶ್ರೀ ಪೋಲಿಸ್‌ಪಾಟೀಲ, ಸುಮಲತಾ ಶಿವಣಗಿ, ತೇಜಶ್ವಿನಿ ಸಾಸಟ್ಟಿ, ನಿವೇದಿತಾ ಕಲ್ಲೂರ, ಸಮರ್ಥ ಅಲ್ಲಾಪೂರ, ಆಕಾಶ ಪೂಜಾರಿ, ಆಕಾಶ ನಾಯ್ಕೋಡಿ ಅವರಿಗೆ ಪ್ರತಿಭಾ ಪುರಸ್ಕಾರ ಮಾಡಲಾಯಿತು.

ಕಾರ್ಯಕ್ರಮದ ಅಧ್ಯತೆ ವಹಿಸಿದ ಸಂಸ್ಥೆಯ ಅಧ್ಯಕ್ಷ ಪ್ರಕಾಶ ಚೌಧರಿ, ಆಡಳಿತಾಧಿಕಾರಿ ಮಹಾಂತೇಶ ಚೌಧರಿ ಮಾತನಾಡಿ, ಶಿಕ್ಷಣದಲ್ಲಿ ಎಸ್.ಎಸ್.ಎಲ್.ಸಿ ಹಂತ ಅತ್ಯಂತ ಮಹತ್ವದ್ದಾಗಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಶಾಲೆಯ ಮುಖ್ಯಗುರು ವಿಶ್ವನಾಥ ಯಾತನೂರ, ನೀಲಾಂಬಿಕಾ ಕತ್ತಿ, ರೇಣುಕಾ ಅಂಗಡಿ, ಮಂಜುನಾಥ ಮಠ, ಮಹೇಶ ಬಿರಾದಾರ, ಸಂಜೀವ ರಾಠೋಡ, ರುದ್ರಗೌಡ ಅವರಾದಿ, ರಾಜಕುಮಾರ ಹೊಸಮನಿ, ಅಬ್ದುಲ್‌ರಜಾಕ, ಗಂಗಾ. ಅಪೂರ್ವ ಹಿರೇಮಠ, ಭಾಗ್ಯಶ್ರೀ ಮಲ್ಲಾಬಾದಿಮಠ, ಈರಣ್ಣಗೌಡ ಮ್ಯಾಗೇರಿ ಸೇರಿದಂತೆ ಸಿಬ್ಬಂದಿವರ್ಗ, ಪಾಲಕರು ಇದ್ದರು.

# ಸರ್ಕಾರಿ ಪಾಲಿಟೆಕ್ನಿಕ್ ಪ್ರವೇಶಕ್ಕೆ ಮೇ.30 ಕೊನೆ ದಿನ

**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ತಾಲೂಕಿನ ಟಕ್ಕಳಕಿಯಲ್ಲಿರುವ ಬಸವನಬಾಗೇವಾಡಿಯ ಸರ್ಕಾರಿ ಪಾಲಿಟೆಕ್ನಿಕ್ ಪ್ರಥಮ ವರ್ಷದ ಡಿಪ್ಲೋಮಾ ಅಟೋಮೊಬೈಲ್ ಇಂಜಿನಿಯರಿಂಗ್, ಫುಡ್ ಪ್ರೋಸಿಂಗ್ ಮತ್ತು ಪ್ರಿಜರ್ವೇಶನ್ ವಿಭಾಗಗಳಿಗೆ ಎಸ್‌ಎಸ್‌ಎಲ್ಸಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಪ್ರವೇಶ ಪಡೆದುಕೊಳ್ಳಬಹುದು. ಪ್ರವೇಶ ಪಡೆದುಕೊಳ್ಳಲು ಇಚ್ಛಿಸುವ ವಿದ್ಯಾರ್ಥಿಗಳು ಅಗತ್ಯ ದಾಖಲೆಗಳೊಂದಿಗೆ ಮತ್ತು ಶುಲ್ಕದೊಂದಿಗೆ ಆಫ್ಲೈನ್ ಮುಖಾಂತರ ಮೇ. 30 ರೊಳಗೆ ನೇರವಾಗಿ ಪ್ರವೇಶ ಪಡೆಯಬಹುದಾಗಿದೆ. ಮೊದಲು ಬಂದವರಿಗೆ ಮೊದಲ ಆದ್ಯತೆ ಆಧಾರದ ಮೇಲೆ ಪ್ರವೇಶ ನೇರವಾಗಿ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯಲ್ಲಿರುವ ಸಹಾಯವಾಣಿ ಕೇಂದ್ರದ ಮೊಬೈಲ್ ಸಂಖ್ಯೆಗಳಾದ 9449183602,7019737525,8147051249, 8884566788 ಸಂಪರ್ಕಿಸಬಹುದಾಗಿದೆ ಎಂದು ಬಸವನಬಾಗೇವಾಡಿ ಸರ್ಕಾರಿ ಪಾಲಿಟೆಕ್ನಿಕ್ ಪ್ರಾಚಾರ್ಯ ಪ್ರದೀಪ ನಾಗನೂರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಕ್ತದಾನದಿಂದ ಆರೋಗ್ಯ ಸಮತೋಲನ ಸಾಧ್ಯ :ಡಾ.ಜನುಷಾ

**ಉದಯರಶ್ಮಿ ನ್ಯೂಸ್**



ಸಿಂದಗಿ: ರಕ್ತ ಯಾವುದೋ ಅಂಗಡಿ–ಮುಂಗಟ್ಟುಗಳಲ್ಲಿ ಸಿಗುವ ವಸ್ತುವಲ್ಲ. ಮಾನವನ ದೇಹದಲ್ಲಿ ಉತ್ಪತ್ತಿಯಾಗುವ ಸಂಪನ್ಮೂಲ ಎಂದು ರಕ್ತ ನಿಧಿ ಭಂಡಾರದ ವೈದ್ಯೆ ಡಾ. ಜನುಷಾ ಹೇಳಿದರು.

ಪಟ್ಟಣದ ಕೆ.ಎಸ್.ಆರ್.ಟಿ.ಸಿ ಆವರಣದಲ್ಲಿ ಸಿಂದಗಿ ಕೆ.ಎಸ್. ಆರ್.ಟಿ.ಸಿ ನಿಯಂತ್ರಣ ಘಟಕ, ವಿಜಯಪುರ ಜಿಲ್ಲಾಸ್ಪತ್ರೆ ಹಾಗೂ ತಾಲೂಕು ಸಾರ್ವಜನಿಕ ಆಸ್ಪತ್ರೆಯ ಸಹಯೋಗದಲ್ಲಿ ಹಮ್ಮಿಕೊಂಡ ಸ್ವಯಂ ಪ್ರೇರಿತ ರಕ್ತದಾನ ಶಿಬಿರದಲ್ಲಿ ರಕ್ತದಾನ ಮಾಡಿದ ದಾನಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಿ ಮಾತನಾಡಿದ ಅವರು, ಇಂದಿನ ದಿನಮಾನಗಳಲ್ಲಿ ರಕ್ತದ ಅವಶ್ಯಕತೆ ಹೆಚ್ಚಾಗಿದ್ದು, ಯುವಕರು ಯಾವುದೇ ತಪ್ಪು ಭಾವನೆ ಇಲ್ಲದೇ ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಬೇಕು. ರಕ್ತದಾನದಿಂದ ಆರೋಗ್ಯ ಸಮತೋಲನ ಕಾಪಾಡಲು ಸಹಾಯಕಾರಿಯಾಗಿದೆ ಎಂದರು.

ಈ ವೇಳೆ 17ಕ್ಕೂ ಅಧಿಕ ಯುವಕರು ರಕ್ತದಾನ ಮಾಡಿದರು. ಇದೇ ಸಂದರ್ಭದಲ್ಲಿ ಆನಂದ ಬಡಿಗೇರ್, ಮಹ್ಮದಆರೀಫ ಹವಾಲ್ದಾರ್, ಅರುಣಕುಮಾರ, ವಿಶಾಲ ಕೌಲಗಿ, ಬಿಬಿಖತೀಜಾ, ರಾಜಕುಮಾರ್ ನರಗೋದಿ, ಪ್ರಕಾಶ್ ಕೌಲಗಿ, ರಾಜು ಸೇರಿದಂತೆ ಡಿ ವರ್ಗದ ನೌಕರರು, ಜಿಲ್ಲಾ ಮತ್ತು ತಾಲೂಕು ಆಸ್ಪತ್ರೆಯ ಸಿಬ್ಬಂದಿಗಳು ಹಾಗೂ ಕೆ.ಎಸ್.ಆರ್.ಟಿ.ಸಿ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಕೊಳವೆಬಾವಿ ನಿಯಮ ಪಾಲಿಸದಿದ್ದರೆ ಕಾನೂನು ಕ್ರಮ :ಎಸಿ ಗದ್ಯಾಳ

**ಉದಯರಶ್ಮಿ ನ್ಯೂಸ್**



ಇಂಡಿ: ಹೊಲದಲ್ಲಿ ಕೊಳವೆ ಬಾವಿ ನಿರ್ಮಿಸುವ ಪೂರ್ವಭಾವಿಯಾಗಿ ಜಮೀನು ಮಾಲಿಕರು 15 ಮುಂಚಿತವಾಗಿ ತಹಸೀಲ್ದಾರ, ಗ್ರಾ.ಪಂ, ಗ್ರಾಮ ಲೆಕ್ಕಿಗ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಂತರ್ಜಲ ವಿಭಾಗ, ಪಂಚಾಯತ ಇಂಜಿನಿಯರಿಂದ ಇಲ್ಲವೆ ಪುರಸಭೆ ಇವರಿಗೆ ಸಂಬಂದಿತ ಇಲಾಖೆಗೆ ಲಿಖಿತ ಮಾಹಿತಿ ನೀಡತಕ್ಕದ್ದು ಎಂದು ಕಂದಾಯ ಉಪವಿಬಾಗಾಧಿಕಾರಿ ಅಬೀದ್ ಗದ್ಯಾಳ ಹೇಳಿದರು.

ಪಟ್ಟಣದ ಮಿನಿ ವಿಧಾನಸೌಧದಲ್ಲಿ ಸಬಾಭವನದಲ್ಲಿ ಕೊಳವೆ ಭಾವಿ ಏಜನ್ಸಿ ಮಾಲಿಕರಿಂದ ನಡೆದ ಸಭೆಯಲ್ಲಿ ಕೊಳವೆ ಬಾವಿ ಕೊರೆಯುವ ಕುರಿತು ಪಾಲಿಸ ಬೇಕಾದ ನಿಯಮಗಳ ಮಾಹಿತಿ ನೀಡುವ ಸಭೆಯಲ್ಲಿ ಮಾತನಾಡುತ್ತಿದ್ದರು.

ವಿಫಲವಾದ ಕೊಳವೆ ಬಾವಿಯಾದಲ್ಲಿ ಅದನ್ನು ಮುಚ್ಚಲು ತೆಗೆದುಕೊಳ್ಳಲು ಬೇಕಾದ ಕ್ರಮಗಳ ಕುರಿತು ಮತ್ತು ಕೊಳವೆ ಬಾವಿ ಕೊರೆಯುವ ಕಾರ್ಯ ಮುಗಿದ ನಂತರ ಕೊರೆಯುವ ಏಜನ್ಸಿಯವರು ಕೊಳವೆ ಬಾವಿಗೆ ಸಾರ್ವಜನಿಕರ ಸುರಕ್ಷತೆಗಾಗಿ ಸ್ಟೀಲ್ ಪ್ಲೇಟಿನಿಂದ ಮುಚ್ಚಬೇಕು ಎಂದರು.

ಕೊರೆದ ಕೊಳವೆಬಾವಿಯನ್ನು ಮುಚ್ಚಳದ ಮೇಲಕ್ಕೆ ಒಂದರಿಂದ ಎರಡು ಅಡಿಗಳಷ್ಟು ಹಸಿ ಮಣ್ಣಿನಿಂದ ಮುಚ್ಚಿ ಮುಳ್ಳಿನ ಗಿಡಗಳನ್ನು ಇಡಬೇಕು ಎಂದು ಹೇಳಿ ಇದರಂತೆ 21 ನಿಯಮಗಳನ್ನು ಪಾಲಿಸಬೇಕು ಇಲ್ಲದಿದ್ದರೆ ಕಾನೂನು ಪ್ರಕಾರ ಕ್ರಮ ಜರುಗಿಸಲಾಗುತ್ತದೆ ಎಂದರು.

ತಹಸೀಲ್ದಾರ ಮಂಜುಳಾ ನಾಯಕ, ಗಣಿ ಮತ್ತು ಭೂ ಗರ್ಭ ಇಲಾಖೆಯ ಮೋಹನ್ ಕುಮಾರ ಎಸ್, ಪರಿಸರ ಮಾಲಿನ್ಯ ಇಲಾಖೆಯ ಬಸವರಾಜ ಮಮದಾಪುರ, ಪ್ರೋಬೆಷನರಿ ಡಿ.ಎಸ್.ಪಿ ಮುರ್ತುಜ ಖಾದ್ರಿ ಮಾತನಾಡಿದರು.

ಸಭೆಯಲ್ಲಿ ಎಸ್.ಆರ್. ಮುಜಗೊಂಡ, ಏಜನ್ಸಿ ಮಾಲಿಕರಾದ ಎಂ.ಎಸ್.ಬೇವನೂರ, ಟಿ. ಎಸ್.ಬಿರಾದಾರ, ಎಸ್.ಆರ್. ಕನ್ನೂರ, ಆರ್.ಎಸ್.ಬಿರಾದಾರ, ಜಿ.ಎಸ್.ಮಾದರ, ಇಲಾಖೆಯ ಎಚ್.ಎಚ್.ಗುನ್ನಾಪುರ, ನಂದೀಪ ರಾಠೋಡ, ಪಿ.ಎಸ್.ಐ ಎಚ್. ಎಂ.ಹೊಸಮನಿ,ಉಪ ತಹಸೀಲ್ದಾರ ಎ.ಎಸ್.ಗೋಟ್ಯಾಳ ಮತ್ತಿತರಿದ್ದರು.

# ಸಮಾಜ ಸುಧಾರಣೆ ವಚನದ ಆಶಯ :ಪ್ರಾ.ಹೆಗ್ಗಣದೊಡ್ಡಿ

**ಉದಯರಶ್ಮಿ ನ್ಯೂಸ್**




ವಿಜಯಪುರ: ಬಸವದಿ ಶರಣರು ಭೇದವಿಲ್ಲದ ನಿರ್ಮಾಣ ಮಾಡಿದರು. ವಚನ ಸಾಹಿತ್ಯ ಜನಸಾಮಾನ್ಯರಿಗೂ ಅರ್ಥವಾಗುವಂಥದ್ದು. ಕಾಯಕದಲ್ಲಿ ನಿರಂತನಾಗಿರಬೇಕು, ಹುಸಿ ಹೇಳದೆ ಸತ್ಯ ಪ್ರತಿಪಾದಿಸಬೇಕು, ಸಮಾಜ ಸುಧಾರಣೆ ವಚನದ ಆಶಯ ಎಂದು ಸಿಂದಗಿ ಎಚ್ ಜಿ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯ ಎ ಆರ್ ಹೆಗ್ಗಣದೊಡ್ಡಿ ಅಭಿಪ್ರಾಯ ವ್ಯಕ್ತಪಡಿಸಿದರು.

ಶನಿವಾರ ಅನ್ನಪೂರ್ಣ ಮಹದೇವಪ್ಪ ಕಾಗಲ್ಕರ್ ದಿ ಭೀಮಕ್ಕ ರಾಮಚಂದ್ರ ಕಾಗಲ್ಕರ್ ದತ್ತಿ ಹಾಗೂ ಶ್ರೀಮತಿ ಶಾಂತಾಬಾಯಿ ಸುಖರಾಮ್ ನೂಲಿ ಕರ್ ದತ್ತಿ ಕಾರ್ಯರ್ಕ್ರಮ ಉದ್ಘಾಟಿಸಿ ಮಾತನಾಡಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಜನಸಾಮಾನ್ಯರಿಗೆ ಮುಖ್ಯ ವಾಹಿನಿಗೆ ತರುತ್ತಿರುವುದು ಶ್ಲಾಘನೀಯ ಎಂದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ ತಿಕೋಟ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿದ್ದರಾಮಯ್ಯ ಲಕ್ಕುಂಡಿಮಠ ಮಾತನಾಡಿ, ಪ್ರಗತಿಪರ ಸಮಾಜದ ನಿರ್ಮಾಣವೇ ವಚನ ಸಾಹಿತ್ಯ. ಶ್ರದ್ಧೆಯಿಂದ ಮಾಡಿದ ಕಾಯಕ ಪೂಜೆಗಿಂತ ಶ್ರೇಷ್ಠ ಇಂದು ವಚನ ಸಾಹಿತ್ಯ ಸುಂದರ ಬದುಕಿನ ಸಾಹಿತ್ಯವಾಗಿದೆ ಎಂದರು.

ಶರಣರ ವಚನ ಸಾಹಿತ್ಯ ಕುರಿತು ಮಮತಾ ಮುಳಸಾವಳಗಿ ಉಪನ್ಯಾಸ ನೀಡಿ, ಪ್ರಬುದ್ಧತೆಯ ಮೊಹೊನ್ನತ್ತ ಶಿಖರ ವಚನ ಸಾಹಿತ್ಯ. ವಚನವೆಂದರೆ ಹುಸಿಯಾಗದ ಮಾತು. ಕನ್ನಡ ವಚನ ಸಾಹಿತ್ಯ ವಿಶ್ವಕ್ಕೆಲ್ಲ ನೀಡಿದ ಕೊಡುಗೆ ಅಲ್ಲಮ ಪ್ರಭು ಹಾಗೂ ಅಕ್ಕಮಹಾದೇವಿ ಸಂವಾದವೇ ವಚನ ಎಂದರು.

ಕಾಯಕ ಕುರಿತು ಶರಣ ಸಂಸ್ಕೃತಿಯ ಚಿಂತಕಿ ಚೈತನ್ಯ ಮುದ್ದೇಬಿಹಾಳ ಉಪನ್ಯಾಸ ನೀಡಿ ಬಸವಣ್ಣ ಬಿತ್ತಿದ ಬೀಜಗಳು ನಾವು ಕಾಯಕವೇ ಕೈಲಾಸದಲ್ಲಿ ನಂಬಿಕೆಯಿಟ್ಟು ಗೌರವದಿಂದ ಬದುಕಿದವರು. ಸತ್ಯ ಶುದ್ಧ ಕಾಯಕವೇ ಶ್ರೇಷ್ಠ ಶರಣರ ದೃಷ್ಟಿಯಲ್ಲಿ ಹೊನ್ನವು ಮಣ್ಣೆ ಎಂದರು.

ಇದೇ ಸಂದರ್ಭದಲ್ಲಿ ಇಂಡಿ ಶಿಕ್ಷಕರ ಸಂಘದ ಪದಾಧಿಕಾರಿಗಳಾದ ಜಯಶ್ರೀ ತಲಗ, ವಿಜಯಲಕ್ಷ್ಮಿ ಡಿಸಲೆ, ರಜಿಯಾ ಚಪ್ಪರಬಂದ, ರಾಜಶ್ರೀ ನಾರಾಯಣಕಾರ, ಗೌರವಿಸಿ ಸನ್ಮಾನಿಸಲಾಯಿತು.

ವೇದಿಕೆ ಮೇಲೆ ರೇಣುಕಾ ತಳವಾರ, ಡಾ ಸುರೇಶ್ ಕಾಗಲಕರಡ್ಡಿ, ರಾಜಸಾಬ್ ಶಿವನಗುತ್ತಿ, ರೇಣುಕಾ ತಳವಾರ, ಉಪಸ್ಥಿತರಿದ್ದರು. ಸುನಂದ ಕೋರಿ ರೇಣುಕಾ ತಳವಾರ್ ಪ್ರಾರ್ಥಿಸಿದರು, ಡಾ ಆನಂದ್ ಕುಲಕರ್ಣಿ ಪ್ರಾಸ್ತಾವಿಕವಾಗಿ ಮಾತನಾಡಿದರು ಸುರೇಶ್ ಜತ್ತಿ ಸ್ವಾಗತಿಸಿ ನಿರೂಪಿಸಿದರು. ಶೋಭಾ ಬಡಿಗೇರ ವಂದಿಸಿದರು.

ಹಾಸಿಂಪೀರ್ ವಾಲಿಕಾರ, ಕಮಲಾ ಮುರಾಳ್, ಜಿ ಎಸ್ ಬಳ್ಳೂರ್, ಅಹಮದ ವಾಲಿಕಾರ್, ಅರ್ಜುನ್ ಶಿರೂರ್, ಶಾಂತ ವಿಭೂತಿ, ಸುರಭಿ ತಲಗ್, ದ್ಯಾವಪ್ಪ ಗರಸಂಗಿ, ಎ□□□ಸ್ ಕುಂಬಾರ್ ಎಸ್ ವಾಯ್ ತುದಿಗಾಲ್, ಎಸ್ ಎಸ್ ಭಟಗೇರಿ, ಭಾಗಿರತಿ ಶಿಂದೆ, ಕೆ ಎಸ್ ಹಣಮಾನಿ, ಟಿ ಆರ್ ಹಾವಿನಾಳ್, ಎಸ್ ಬಿ ಕಲಿಕೇರಿ, ಎಂ ಎನ್ ನಿಂಬಾಳ್ ಮುಂತಾದರು ಉಪಸ್ಥಿತರಿದ್ದರು.

# ಆಧ್ಯಾತ್ಮದ ಅರಿವು ಬಾಳಿಗೆ ಸಂಜೀವಿನಿ :ಶಿವಬಸವ ಶ್ರೀ

**ಉದಯರಶ್ಮಿ ನ್ಯೂಸ್**



ಇಂಡಿ: ಪರಿಶುದ್ಧವಾದ ಪವಿತ್ರವಾದ ಜೀವನ ರೂಪಿಸಿಕೊಳ್ಳಲು ಆಧ್ಯಾತ್ಮ ಜ್ಞಾನದ ಅರಿವು ಬೇಕು. ಆಧ್ಯಾತ್ಮದ ಜ್ಞಾನ ಬದುಕನ್ನು ವಿಕಾಸಗೊಳಿಸಿ ಸನ್ಮಾರ್ಗದತ್ತ ಕರೆತರಲು ಸಹಕಾರಿಯಾಗುತ್ತದೆ. ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂಬ ಸಂದೇಶ ಪಾಲಿಸಬೇಕಿದೆ. ಇಂದು ಮಾನವ ಧಮಧ ಉಳಿದರೆ ಎಲ್ಲ ಧರ್ಮಗಳು ಉಳಿಯಲು ಸಾದ್ಯ ಎಂದು ದಿವ್ಯ ಸಾನಿಧ್ಯ ವಹಿಸಿದ ಖೇಡಗಿ ವಿರಕ್ತಮಠದ ಶಿವಬಸವ ರಾಜೇಂದ್ರ ಶ್ರೀಗಳು ಹೇಳಿದರು.

ಅವರು ತಾಲೂಕಿನ ಗುಬ್ಬೆವಾಡ ಗ್ರಾಮದಲ್ಲಿ ಗುಪ್ತಾಯಿದೇವಿ ಜಾತ್ರಾ ಮಹೋತ್ಸವ ಮತ್ತು ನೂತನವಾಗಿ ನಿರ್ಮಿಸಿದ ಭವ್ಯಗೋಪುರ ಕಳಸಾರೋಹಣ ಕಾರ್ಯಕ್ರಮದ ಸಾನಿದ್ಯ ವಹಿಸಿ ಮಾತನಾಡಿದರು.

ಮಳೆ ಬೆಳೆ ಚೆನ್ನಾಗಿ ಬಂದು ನಾಡು ಸುಭೀಕ್ಷವಾಗಬೇಕಾದರೆ ಪ್ರತಿಯೊಬ್ಬರು ಧರ್ಮ ಮಾರ್ಗದಲ್ಲಿ ಸಾಗಬೇಕು ಎಂದರು.

ದೇವಸ್ಥಾನ ಸಮಿತಿಯ ಸತೀಶ ಚಾಂದಕವಟೆ ಮಾತನಾಡಿ ಮನಸ್ಸು ಶುದ್ದವಾಗಿಟ್ಟುಕೊಳ್ಳಬೇಕು. ಭಕ್ತರಲ್ಲಿ ಭಕ್ತಿ ಪ್ರತಿಷ್ಠಾಪನೆಯಾದಾಗ ಮಾತ್ರ ಅದಕ್ಕೆ ನಿಜವಾದ ಅರ್ಥ ಬರುತ್ತದೆ. ದೇಗುಲಗಳು ಮನಸ್ಸಿಗೆ ನೆಮ್ಮದಿ ನೀಡುವ ಸ್ಥಳ ಎಂದರು.

ದೇವಸ್ಥಾನ ಸಮಿತಿಯ ಧರ್ಮಣ್ಣ ಮರಗೂರ, ಕಾಶಿನಾಥ ಲಚ್ಯಾಣ, ಶಿವಲಿಂಗ ಲಚ್ಯಾಣ, ದೀಲಪ್ಪ ಮರಗೂರ, ಬಸವರಾಜ ಹೆಗೊಂಡೆ, ಶಿವರಾಯ ಕೋಳಿ ಮಾತನಾಡಿದರು.

ವೇದಿಕೆಯ ಮೇಲೆ ಮಲ್ಲಯ್ಯ ಮಠಪತಿ, ಬಸಲಿಂಗಯ್ಯ ಮಠಪತಿ, ಸಿದ್ದರಾಮ ಚಾಂದಕವಠೆ, ಗ್ರಾ.ಪಂ ಅಧ್ಯಕ್ಷ ಸುರೇಶ ಆಲೂರ,ಉಪಾಧ್ಯಕ್ಷ ಆನಂದರಾವ ಚಾಂದಕವಟೆ, ಸದಸ್ಯರಾದ ಅಮೃತ ಮರಗೂರ, ಸಿದ್ದು ಕೋಲಿ, ಹಸನಸಾಬ ಕಸಾಯಿ, ಚಂದ್ರಕಾಂತ ಮರಗೂರ, ಸಿದ್ದಾರೂಢ ಮರಗೂರ, ಆದ–'ೀಶ ಧೂಳೆ , ಪಂಚಪ್ಪ ಮರಗೂರ ಮತ್ತಿತರಿದ್ದರು.

# ಅಪ್ರಾಪ್ತೆ ಮೇಲೆ ಲೈಂಗಿಕ ದೌರ್ಜನ್ಯ :ದೂರು ದಾಖಲು

**ಉದಯರಶ್ಮಿ ನ್ಯೂಸ್**



ಇಂಡಿ: ಅಪ್ರಾಪ್ತೆಯ ಮೇಲೆ ಲೈಂಗಿಕ ದೌರ್ಜನ್ಯ ನಡೆದಿರುವ ಘಟನೆ ವಿಜಯಪುರ ಜಿಲ್ಲೆಯಲ್ಲಿ ನಡೆದಿದೆ.

ಅನ್ಯಕೋಮಿನ ಯುವಕ ಸೋಹೇಲ್ ಹೊನಮುರಗಿ ಅಪ್ರಾಪ್ತೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಅಪ್ರಾಪ್ತೆಯನ್ನು ಪುಸಲಾಯಿಸಿ ಮಹಾರಾಷ್ಟ್ರಕ್ಕೆ

13–05–2024 ಕರೆದುಕೊಂಡು ಹೋಗಿ 17–05–2024 ವಿಜಯಪುರ ಜಿಲ್ಲೆಗೆ ಸೋಹೇಲ್ ಬಿಟ್ಟಿದ್ದಾನೆ ಎಂದು ದೂರಿನಲ್ಲಿ ಉಲ್ಲೇಖ ಮಾಡಲಾಗಿದೆ. ಆರೋಪಿ ಸೋಹೇಲ್ ವಿರುದ್ಧ ಕಲಂ 366, 376(2) (ಐ), ಐಪಿಸಿ & 4, 6, 12, pocso act 2012 ಅಡಿಯಲ್ಲಿ ಇಂಡಿ ಗ್ರಾಮೀಣ ಪೊಲೀಸ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



# ಬ್ಯುಸಿ...ಬಿಡುವಿಲ್ಲ...



## ಭಾವರಶ್ಮಿ



– ಸುಮಾ ಗುರುರಾಜ್
("ನಮ್ಮ ಕಥಾ ಅರಮನೆ" ಬರಹಗಾರರು)

ಉದಯರಶ್ಮಿ ದಿನಪತ್ರಿಕೆ

ಇತ್ತೀಚೆಗೆ ಚಿಕ್ಕ ಮಕ್ಕಳಿಂದ ಹಿಡಿದು ಹಿರಿಯರವರೆಗೆ ಅತೀ ಹೆಚ್ಚು ಬಳಸುವ ಸಾಮಾನ್ಯ ಪದ ಎಂದರೆ ಬ್ಯುಸಿ, ಬಿಡುವಿಲ್ಲ, ಟೈಮಿಲ್ಲ... ಬದುಕಿಗಾಗಿ ದುಡಿಮೆ ಎನ್ನುವುದಕ್ಕಿಂತ ದುಡಿಮೆಗಾಗಿ ಬದುಕು ಎನ್ನುವಂತಾಗಿದೆ ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ.


ಇದಕ್ಕೆ ಹೊಂದಿಕೊಂಡಂತೆ ನೈಜ ಕಥನ

ತಾಯಿಲ್ಲದ ಮಗ ಎಂದು ತುಸು ಹೆಚ್ಚೇ ಪ್ರೀತಿಯಿಂದ ಸಾಕಿದ ಅಪ್ಪನಿಗೆ ಮಗನೇ ಪ್ರಪಂಚ. ಅವನಿಗೂ ಅಪ್ಪನೇ ಪ್ರಪಂಚ. ಅಪ್ಪನೊಟ್ಟಿಗೆ ತರಕಾರಿ ತರೋದು,ತಿಂಡಿ ಅಡುಗೆ ಮಾಡಲು ಸಹಾಯ ಮಾಡುತ್ತಾ ಮಾತಾಡುವುದು,ನಗು ಹರಟೆ, ಹೂ ತೋಟ ಪೋಷಿಸಿ ಸಂಭ್ರಮಿಸಿದ್ದು ಎಲ್ಲವೂ ಚಂದವಾಗಿತ್ತು. ಕಾಲ ವಾಗುತ್ತ ಶಾಲೆ ಕಾಲೇಜು ವಿದ್ಯಾಭ್ಯಾಸ ಮುಗಿದು ಕೆಲಸಕ್ಕೆ ಸೇರಿದ ಮಗ.

ಈಗ ಕೆಲಸದ ನೆಪದಲ್ಲಿ, ಲ್ಯಾಪ್ ಟಾಪ್, ಬ್ಲೂಟೂತ್ ,ಮೊಬೈಲ್, ಆನ್ಕಾಲ್, ಜೂಂಮೀಟ್ ಎಂದು ಎದುರಿಗಿದ್ದ ಅಪ್ಪನನ್ನು ಮಾತಾಡಿಸುವುದು ಕಷ್ಟವಾಯಿತು.

ಒಟ್ಟಿಗೆ ಕೂತು ಕಾಫಿ ಕುಡಿಯುವ ಆಸೆಯಿಂದ, ಕಾಫಿ ಕಪ್ಪುಗಳನ್ನು ಕೈಯಲ್ಲಿ ಹಿಡಿದು ಕಾದಿದ್ದೆ ಬಂತು, ಮಗ ಆತುರವಾಗಿ ಗುಟುಕರಿಸಿ ಹೊರನಡೆದಿದ್ದ.

ದುಡಿಮೆಯ ಮೆಟ್ಟಿಲುಗಳನ್ನು ಏರುವ ಭರದಲ್ಲಿ ತನಗಾಗಿ ಜೀವ ತೇದಿದ್ದ ಅಪ್ಪನನ್ನು ಮಾತಾಡಿಸುವುದು ನಿಂತೇ ಹೋಯಿತು. ಮಗನ ಆತ್ಮೀಯ ಮಾತಿಗೆ ಹಪಹಪಿಸಿ ಮೌನದ ಬೇಲಿ ಎಳೆದುಕೊಂಡರು ಅಪ್ಪ. ಅದೊಂದು ದಿನ ಮನೆಗೆ ಬಂದ ಮಗ ವಿದೇಶಕ್ಕೆ ಕೆಲಸದ ನಿಮಿತ್ತ ಹೊರಟು ನಿಂತಾಗ, ಅಪ್ಪನಿಗೆ ಪ್ರಪಂಚವೇ ಶೂನ್ಯವಾಗಿತ್ತು. ಅಪ್ಪ ಎರಡೇ ವರ್ಷದಲ್ಲಿ ವಾಪಸ್ ಬರುವೆ,ನಿಮಗೆ ಎಲ್ಲಾ ವ್ಯವಸ್ಥೆ ಮಾಡುವೆ.ಬನ್ನಿ ಅಪ್ಪ ಏರ್ಪೋರ್ಟ್ ತನಕ ಮಾತಾಡುತ್ತಾ ಹೋಗೋಣ ಎಂದ ಮಾತಿಗೆ, ಇಲ್ಲಾ ಮಗ ಯಾಕೋ ತುಂಬಾ ಸುಸ್ತಾಗ್ತ ಇದೆ, ನೀನು ಹೊರಡು, ಅಲ್ಲಿಂದ ಬಂದ ನಂತರ ಇಬ್ಬರೂ ಕೂತು ಮಾತಾಡುತ್ತಾ ಕಾಪಿ ಕುಡಿಯೋಣ, ಒಟ್ಟಿಗೆ ಕೂತು ಕ್ರಿಕೆಟ್ ನೋಡೋಣ, ಹೊಸಬಟ್ಟೆ ಕೊಂಡು, ಮಸಾಲೆದೋಸೆ ತಿಂದು ಸುತ್ತಾಡಿ ತರಕಾರಿ ತರೋಣ ಎಂದು ಅಪ್ಪನ ಕಣ್ಣಲ್ಲಿ ನೀರಾಡಿತು. ಹೌದು ಅಪ್ಪ, ಒತ್ತಡ , ಬ್ಯುಸಿ ವೃತ್ತಿ ಎಂಬ ವೃತ್ತದಲ್ಲಿ ಸಿಲುಕಿ ನಿಮ್ಮೊಂದಿಗೆ ಕಳೆದ ಸುಂದರ ಕ್ಷಣಗಳನ್ನು ಕಳೆದುಕೊಂಡೆ. ಎರಡೇ ವರ್ಷದಲ್ಲಿ ವಾಪಸ್ ಬರುವೆ, ಮೊದಲಿನಂತೆ ಇರುವ ಅಪ್ಪ ಎಂದು ಹೊರಟ ಮಗನಿಗೆ ಹಾರೈಸಿದರು. ಕೊಂಚ ಹೊತ್ತು ನೋಡುತ್ತ ನಿಂತಿದ್ದ ಅಪ್ಪ ಎದೆ ಹಿಡಿದು ಕುಸಿದವರು ಮತ್ತೆ ಮೇಲೆಳಲೇ ಇಲ್ಲ. ವಿಷಯ ತಿಳಿಯುಷ್ಟರಲ್ಲಿ ವಿದೇಶದಲ್ಲಿ ಪರದೇಶಿಯಾಗಿದ್ದ ಮಗ. ತನಗಾಗಿ ತನ್ನ ಜೀವನವನ್ನೆ ತ್ಯಾಗ ಮಾಡಿದ ಅಪ್ಪನ ಆಸೆ ಈಡೇರಿಸುವ ಕನಸು ನನಸಾಗಲಿಲ್ಲ ಎಂಬ ಪಶ್ಚಾತ್ತಾಪದ ಬೇಗುದಿಯಲ್ಲಿ ಬೆಂದು ನೊಂದರೂ ಅಪ್ಪ ನೊಟ್ಟಿಗೆ ಕೊಂಚ ಸಮಯ ಕಳೆಯಬೇಕಾಗಿತ್ತು ಎನಿಸಿತು. ಜ್ವರ ಬಂದಾಗ, ಆರೈಕೆ ಮಾಡಿ ತನ್ನ ರಕ್ತ ಕೊಟ್ಟು ಕಾಪಾಡಿದ ತಂದೆಯ ಸಹನೆ, ನಿಸ್ವಾರ್ಥ,ಕರುಣೆ ಮಗನ ಕಣ್ಣು ತೋಯಿಸಿತ್ತು. ತಾಯಿಯಂತೆ ಮಗನ ಏಳಿಗೆಗೆ ಪ್ರತಿಹಂತದಲ್ಲೂ ಹರಕೆ ಪೂಜೆ ಮಾಡಿ ಸಲುಹಿದ ಅಪ್ಪನನ್ನು ನೋಡಿಕೊಳ್ಳಬೇಕಿತ್ತು ಎನಿಸದೆ ಇರಲಿಲ್ಲ. ದುಡಿಮೆ ಪ್ರತಿಷ್ಠೆಯ ಹಿಂದೆ ಓಡಿ ಬದುಕಿನ ಅತ್ಯಮೂಲ್ಯ ಕ್ಷಣಗಳನ್ನು ಕಳೆದುಕೊಂಡು ಜೀವನದಲ್ಲಿ ಜಿಗುಪ್ಸೆ ಮೂಡಿತ್ತು. ಬಿಡುವು ಮಾಡಿಕೊಳ್ಳಬೇಕಿತ್ತು.... ಆದರೆ ಕಾಲ ಮಿಂಚಿತ್ತು.



ಹಣ, ಪ್ರತಿಷ್ಠೆಯ, ಹಿಂದೆ ಓಡದೆ, ಸ್ವಾರ್ಥ ತೊರೆದು ನಮಗಾಗಿ ಬದುಕಿದವರ ಬದುಕಿಗೊಂದಿಷ್ಟು ಸಾಂತ್ವನ, ಸಮಾಧಾನ,ಸಂತೋಷ ನೀಡಲು ಬಿಡುವು ಮಾಡಿಕೊಂಡು ಬ್ಯುಸಿ ಇಲ್ಲ ಎನ್ನುವಂತಾದರೆ ಸಾರ್ಥಕ ಬದುಕು...

### ತಂಪೆರೆದ ಮಳೆ । ಕೃಷಿ ಚಟುವಟಿಕೆ ಚುರುಕು । ಉತ್ತಮ ಮಳೆ–ಬೆಳೆಯ ನಿರೀಕ್ಷೆ

# ರೈತರಲ್ಲಿ ಮಂದಹಾಸ ಮೂಡಿಸಿದ ಕೃತ್ತಿಕಾ ಮಳೆ

ಉದಯರಶ್ಮಿ ನ್ಯೂಸ್

– ಇಲಾಹಿ ಇ. ಜಮಖಂಡಿ



ಚಿಮ್ಮಡ: ಕಳೆದ ನಾಲ್ಕು ದಿನಗಳಲ್ಲಿ ಸುರಿದ ಮಳೆಯಿಂದ ಕೆಂಡದಂತಾಗಿದ್ದ ಈ ಭಾಗದ ವಾತಾವರಣ ತಂಪೆರೆದಂತಾಗಿದ್ದು ರೈತರ ಮೊಗದಲ್ಲಿ ಮಂದಹಾಸ ಮೂಡಿಸಿದೆ. ಖುಷಿಯಿಂದಲೇ ಅವರು ಬಿತ್ತನೆ ಕಾರ್ಯಕ್ಕೆ ಅಣಿಯಾಗಿದ್ದಾರೆ.

ಕಳೆದ ಒಂದು ತಿಂಗಳಿನಿಂದ ಜಮೀನಗಳನ್ನು ಹದವಾಡಿ ಗದ್ದೆಗಳಲ್ಲಿ ತಿಪ್ಪೆಗೊಬ್ಬರವನ್ನು ಮಿಶ್ರಣಗೊಳಿಸಿಕೊಂಡು ಮಳೆಗಾಗಿ ಜಾತಕ ಪಕ್ಷಿಯಂತೆ ಕಾಯುತ್ತಿದ್ದ ರೈತರಿಗೆ ಕಳೆದ ಮಂಗಳವಾರ ಹಾಗೂ ಗುರುವಾರ ರಾತ್ರಿ ಸುರಿದ ಮಳೆ ಅವರಲ್ಲಿ ಆಶಾ ಭಾವನೆ ಮೂಡಿಸಿದ್ದು ವರುಣದೇವನ ಮೇಲೆ ಭಾರ ಹಾಕಿ ಬಹುತೇಕ ರೈತರು ಕೃಷಿ ಚಟುವಟಿಕೆ ಪ್ರಾರಂಭಿಸಿದ್ದಾರೆ.

ಕಳೆದ ಎಪ್ರಿಲ್ ನಲ್ಲಿಯೇ ಸು–ರಿಯುವ ಅಶ್ವಿನಿ, ಭರಣಿ ಮಳೆಗಳು ಕೈಕೊಟ್ಟರೂ ಮುಂಗಾರು ಪೂರ್ವ ಕೃತ್ತಿಕಾ ಮಳೆ ಪ್ರಾರಂಭಗೊಂಡಿದ್ದು ರೈತರಲ್ಲಿ ಉತ್ತಮ ಮಳೆ, ಬೆಳೆಯ ನಿರೀಕ್ಷೆ ಮೂಡಿಸಿದೆ.

ಈ ಬಾರಿಯೂ ಬೇಸಿಗೆಯಲ್ಲಿ ಕುಡಿಯುವ ನೀರಿಗಾಗಿ ಇಲ್ಲಿನ ಘಟಪ್ರಭಾ ಎಡದಂಡೆ ಕಾಲುವೆಗೆ ಹತ್ತು ದಿನದಗಳಂತೆ ಎರಡುಬಾರಿ ನೀರು ಹರಿಸಿದ್ದರಿಂದ ಈ ಭಾಗದ ಕೆರೆಗಳು ಭರ್ತಿಯಾಗಿದ್ದು ಬಾವಿ, ಕೊಳವೆ ಬಾವಿಗಳ ಅಂತರ್ಜಲಮಟ್ಟ ಹೆಚ್ಚಿದೆ, ಪ್ರಸಕ್ತ ಮಳೆಯೂ ಈ ಭಾಗದಲ್ಲಿ ರಣಬಿಸಿಲ ತಾಪದಿಂದ ತತ್ತರಿಸುತಿದ್ದ ಜನರಿಗೆ ಧಗೆಯಿಂದ ಮುಕ್ತಿ ದೊರೆತಂತಾಗಿದ್ದು ಬಹುತೇಕ ರೈತರು ಬಿತ್ತನೆ ಕಾರ್ಯವನ್ನು ಚುರುಕುಗೊಳಿಸಿದ್ದು. ಇದರಿಂದ ಕಳೆದ ಎರಡು ತಿಂಗಳಿನಿಂದ ಕೆಲಸವಿಲ್ಲದೆ ಕಂಗಾಲಾಗಿದ್ದ ಕೂಲಿಕಾರರಿಗೂ ಕೆಲಸ ದೊರೆತಂತಾಗಿದ್ದು ಅವರೂ ಖುಷಿಯಿಂದಲೇ ಗದ್ದೆಗಳತ್ತ ಹೆಜ್ಜೆ ಹಾಕುತ್ತಿದ್ದಾರೆ.

" ಮುಂಗಾರು ಪೂರ್ವ ಮಳೆ ಸಮರ್ಪಕವಾಗಿ ಸುರಿಯುವ ಆಶಾಭಾವಣೆಯಿಂದ ಇದ್ದರೂ ಬಾವಿ, ಬೊರವೆಲ್‌ಗಳ ಆಸರೆಯಿರುವ ರೈತರು ಅರಿಷಿನ, ಕಬ್ಬು ಬಿತ್ತನೆ ಮಾಡಿದ್ದು ಮಳೆಯನ್ನೆ ನಂಬಿರೈತರು ಗೋವಿನಜೋಳ ಸೇರಿದಂತೆ ಹಲವು ಮಿಶ್ರ ಬೆಳೆಗಳ ಬಿತ್ತನೆ ಕಾರ್ಯ ಪ್ರಾರಂಭಿಸಿದ್ದಾರೆ ಮುಂಬರುವ ಮಳೆಗಳು ಸಮರ್ಪಕವಾಗಿ ಸುರಿದರೆ ಬರಗಾಲ ಛಾಯೆಯಿಂದ ರೈತರು ಹೊರಬರಲಿದ್ದಾರೆ."

– ಸುರೇಶ ಅಥಣಿ ಪ್ರಗತಿಪರ ರೈತರು, ಚಿಮ್ಮಡ.

"ರೈತರು ಈಗಷ್ಟೆ ಜಮೀನು ಹದಗೊಳಿಸುವ ಕಾರ್ಯ ಆರಂಭಿಸಿದ್ದು ಕೃಷಿ ಇಲಾಖೆಯಿಂದ ಇನ್ನೆರಡು ದಿನದಲ್ಲಿ ಬಿತ್ತನೆ ಬೀಜಗಳಾದ ಹೆಸರು, ಉದ್ದು, ಸೋಯಾಬಿನ್, ಗೋವಿನಜೋಳ, ಸೇರಿದಂತೆ ಹಲವು ಬೀಜಗಳು ಹಾಗೂ ಬೆಳೆಗೆ ಅಗತ್ಯವಿರುವ ಲಘು ಪೋಷಕಾಂಶಗಳ ದಾಸ್ತಾನು ಬರಲಿದೆ. ರೈತರು ಬೀಜ, ರಸಗೊಬ್ಬರ ಹಾಗೂ ಕೀಟನಾಶಕಗಳನ್ನು ಹೊರಗಡೆಯಿಂದ ಖರೀದಿಸುವ ಅವಶ್ಯವೆನಿಸಿದರೆ ಅಧಿಕೃತ ಪರವಾನಿಗೆ ಪಡೆದ ಮಳಿಗೆಗಳಲ್ಲಿ ಮಾತ್ರ ಖರೀದಿಸಬೇಕು ಅಧಿಕೃತ ಬಿಲ್ಲುಗಳನ್ನು ಪಡೆಯಬೇಕು.

– **ಎಸ್.ಎಂ. ಬಿರಾದಾರ,** ಕೃಷಿ ಅಧಿಕಾರಿಗಳು, ತೇರದಾಳ ವಲಯ.

# ಕಠಿಣ ಪರಿಶ್ರಮವೇ ಸಾಧನೆಗೆ ಮಾರ್ಗ :ಚವ್ಹಾಣ

ಉದಯರಶ್ಮಿ ನ್ಯೂಸ್



ವಿಜಯಪುರ: ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿಯೂ ಪ್ರತಿಭೆ ಇರುತ್ತದೆ. ಸೂಕ್ತ ವೇದಿಕೆ ಸಿಕ್ಕಾಗ ಅದು ಹೊರಗಡೆ ಬರುತ್ತದೆ. ನಾವು ಯಾವ ಶಾಲೆಯಲ್ಲಿ ಓದುತ್ತೇವೆ ಎನ್ನುವುದು ಮುಖ್ಯವಲ್ಲ. ಕಠಿಣ ಪರಿಶ್ರಮವೇ ನಮ್ಮ ಸಾಧನೆಗೆ ಮಾರ್ಗವಾಗುತ್ತದೆ ಎಂದು ಜಿಲ್ಲಾ ಬಂಜಾರಾ ವಿದ್ಯಾವರ್ಧಕ ಸಂಘದ ಸಂಸ್ಥಾಪಕ ಅಧ್ಯಕ್ಷರಾದ ಡಿ.ಎಲ್. ಚವ್ಹಾಣ್‌ರವರು ಹೇಳಿದರು.

ಶನಿವಾರದಂದು ಬಂಜಾರಾ ಕನ್ನಡ ಹಾಗೂ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ಎಸ್‌ಎಸ್‌ಎಲ್‌ಸಿ ಪ್ರತಿಭಾನ್ವಿತ ವಿದ್ಯಾರ್ಥಿಗಳ ಸನ್ಮಾನ ಕಾರ್ಯಕ್ರಮದಲ್ಲಿ ಸಂಸ್ಥೆಯ ವತಿಯಿಂದ ಸನ್ಮಾನಿಸಿ ಮಾತನಾಡಿದ ಅವರು. ಎಲ್ಲಿಯೇ ಓದಿದರೂ ಶ್ರದ್ಧೆಯಿಂದ ಅಭ್ಯಾಸ ಮಾಡಿ, ಮುಂದೆ ಬರಬೇಕು. ಕಲಿತ ಶಾಲೆ, ತಂದೆ–ತಾಯಿಯರ ಕೀರ್ತಿ ಬೆಳಗುವ ಮಕ್ಕಳು ನಾವಾಗಬೇಕು. ಸತತ ಪ್ರಯತ್ನ ಕಠಿಣ ಪರಿಶ್ರಮ, ಆತ್ಮವಿಶ್ವಾಸ, ಸಕಾರಾತ್ಮಕ ಚಿಂತನೆ ಹಾಗೂ ಸಾಧಿಸಬೇಕೆಂಬ ಛಲವೊಂದಿದ್ದರೆ ಎಂತಹ ಸಾಧನೆಯನ್ನು ಮಾಡಬಹುದು ಎಂದು ಹೇಳಿದರು.

ಈ ವೇಳೆಯಲ್ಲಿ ಪ್ರೌಢ ಶಾಲೆಯ ಮುಖ್ಯ ಗುರುಗಳಾದ ಇ.ಡಿ.ಲಮಾಣಿಯವರು ಮಾತನಾಡುತ್ತ, ನಮ್ಮ ಜೀವನದಲ್ಲಿ ಎದುರಾಗುವ ಎಲ್ಲ ಸಂಕಷ್ಟ, ನೋವು–ನಲಿವು, ಅಡೆತಡೆ, ತೊಂದರೆ, ಸಮಸ್ಯೆ ಮತ್ತು ಸವಾಲುಗಳನ್ನು ಸಮರ್ಥವಾಗಿ ಎದುರಿಸಿ ಸೋಲೇ ಗೆಲುವಿನ ಮೂಲ ಎಂಬ ನಾಣ್ಣುಡಿಯಂತೆ ಫಿನಿಕ್ಸ್ ಹಕ್ಕಿಯಂತೆ ಮೇಲೆದ್ದು ನಿಂತು ಹೋರಾಡಿದರೆ ಯಶಸ್ಸು ಲಭಿಸುತ್ತದೆ ಎಂದು ಹೇಳಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಗಳಿಸಿ, ಸಂಸ್ಥೆಯ ಕೀರ್ತಿಯನ್ನು ಹೆಚ್ಚಿಸಿದ ವಿದ್ಯಾರ್ಥಿಗಳಾದ ತೃಪ್ತಿ ತೋದಲಬಾಗಿ, ಆರತಿ ಚವ್ಹಾಣ್, ಅಶ್ವಿನಿ ಚವ್ಹಾಣ್, ರೇಣುಕಾ ಕೋಲಕಾರ, ಅಜೀತ ಚವ್ಹಾಣ್, ಚಂಚಲಾ ಕಾಂಬಳೆ, ಲಕ್ಷ್ಮಿ ರಾಠೋಡ, ಐಶ್ವರ್ಯ ಪಟ್ಟಣದ ಹಾಗೂ ಸುಹಾಸಿನಿ ಕಿಟ್ಟದ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ಮುಖ್ಯ ಗುರುಗಳಾದ ಸಂದೀಪ ರಾಠೋಡ, ಶಿಕ್ಷಕರುಗಳಾದ ಆರ್.ವಿ.ದೇಶಪಾಂಡೆ, ಎ. ಎಂ.ನಾಗೊಂಡ, ಆರ್.ಎನ್.ಬಕಾಟೆ, ಆರ್.ವಿ.ಭುಜಂಗನವರ, ಎಂ.ಎಲ್.ಚವ್ಹಾಣ್, ಜೆ.ಕೆ. ರಾಠೋಡ, ಎಸ್.ಡಿ.ಚವ್ಹಾಣ್, ಎಸ್.ಬಿ.ಒಡೆಯರ, ಎಸ್.ಕೆ.ಶಿಂಧೆ, ಎಸ್.ಎಂ.ಮಾಳಿ ಸೇರಿದಂತೆ ಶಾಲಾ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

### ಕೆಂಭಾವಿ ವಾರ್ಡ್ ನಂಬರ್ 13ರಲ್ಲಿ ನೀರಿನ ಸಮಸ್ಯೆ । ಸ್ಪಂದಿಸದ ಅಧಿಕಾರಿಗಳು

# ಕೊಳವೆಬಾವಿ ರಿಪೇರಿ ಮಾಡಲು ಅಧಿಕಾರಿಗಳ ಅಸಡ್ಡೆ

ಉದಯರಶ್ಮಿ ನ್ಯೂಸ್



ಸುರಪುರ: ಕೆಂಭಾವಿ ಪುರಸಭೆ ವ್ಯಾಪ್ತಿಯಲ್ಲಿ ನೀರಿಗಾಗಿ ನಿತ್ಯ ಅಲೆದಾಡುವ ಪರಿಸ್ಥಿತಿರೊದಗಿದ್ದು, ವಾರ್ಡ್ ನಂಬರ್ 13 ಕುಂಬಾರ ಓಣಿಯು ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ.

ಈ ಕುರಿತು ಅದೆಷ್ಟೋ ಬಾರಿ ಮುಖ್ಯ ಅಧಿಕಾರಿಗಳಿಗೆ ಮನವಿ ಮಾಡಿಕೊಂಡರೂ ಸಾರ್ವಜನಿಕ–ರಿಗೆ ಇಲ್ಲ ಸಲ್ಲದ ಕಾರಣಗಳನ್ನು ಹೇಳಿ ಮಾಡಿಸೋಣ, ಮಾಡುತ್ತೇವೆ ಎಂದು ಹೇಳಿ ಕಳಿಸಿಕೊಡುತ್ತಾರೆ ಮತ್ತು ಹೇಳಿದ್ದೇವೆ ಮಾಡ್ತಾರೆ ಅಂತ ಹೇಳಿ ಇಲ್ಲ ಸಲ್ಲದ ನೆಪ ಹೇಳಿ ಕಳಿಸುತ್ತಾರೆ ಎಂಬುದು ನಾಗರಿಕರ ದೂರು.

ಕುಂಬಾರ್ ಓಣಿ ಸಾರ್ವಜನಿಕರು ಫೋನ್ ಮಾಡಿದರೂ ಕೂಡ ಫೋನ್ ರಿಸೀವ್ ಮಾಡದ ಮುಖ್ಯ ಅಧಿಕಾರಿ ಸಾರ್ವಜನಿಕರು ಈ ರೀತಿಯಾಗಿ ಸಮಸ್ಯೆ ತೋಡಿಕೊಂಡರೂ ಅದಕ್ಕೂ ತಮಗೂ ಸಂಬಂಧವೇ ಇಲ್ಲದೆ ಇರೋ ತರ ವರ್ತಿಸುತ್ತಾರೆ ಎಂದು ಮುಖ್ಯಾಧಿಕಾರಿಗೆ ಜನರು ಹಿಡಿ ಶಾಪ ಹಾಕುತ್ತಿದ್ದಾರೆ.

ಬೋರ್ವೆಲ್ ರಿಪೇರಿಗಾಗಿ ಇದನ್ನು ಸರಿ ಪಡಿಸದಿದ್ದರೆ ಮುಂದಿನ ದಿನಗಳಲ್ಲಿ ಪುರಸಭೆ ಮುಂದೆ ಉಗ್ರವಾದ ಹೋರಾಟ ಮಾಡುತ್ತೇವೆ ಎಂದು ವಾರ್ಡಿನ ಜನರು ಎಚ್ಚರಿಕೆ ನೀಡಿರುತ್ತಾರೆ.

## ಕಾವ್ಯರಶ್ಮಿ

– ರಶ್ಮಿ ಪ್ರಸಾದ್
("ನಮ್ಮ ಕಥಾ ಅರಮನೆ" ಬರಹಗಾರರು)



### ನೆರಳು..!

ಹುಟ್ಟಿನೊಂದಿಗೆ ಜೊತೆಯಾಗಿ
ಎಡಬಿಡದೆ ಒಡನಿರುವೆ
ಬದುಕೆಲ್ಲ ಹಿಂಬಾಲಿಸುತ
ನನ್ನೊಂದಿಗೆ ಮಣ್ಣಾಗುವೆ.!

ನೋವಲ್ಲು ನಲಿವಲ್ಲು ಸದಾ
ಜೊತೆಯಿರುವ ಪಯಣಿಗ.
ಜಗವೆಲ್ಲ ಕೈಬಿಟ್ಟರೂ ದೂರಾಗದ
ಏಕೈಕ ಸಂಗಡಿಗ.!

ಅಡಿಗಡಿಗು ಹೆಜ್ಜೆಹಾಕಿ
ಹೋಗಲಾಡಿಸುವೆ ಭೀತಿ.
ಉಸಿರುಸಿರಿಗೂ ಒಡನಾಡಿಯಾಗಿ
ತುಂಬುವೆ ಪ್ರೀತಿ.!

ನನಗೆ ನೆರಳೆಂದರೆ ಅಲ್ಲ
ಬರೀ ಬೆಳಕಿನ ಮಾಯೆ
ಪ್ರತಿಕ್ಷಣ ಬದುಕಿಗೆ ಭರವಸೆಯ
ಭಗವಂತನ ಛಾಯೆ.!



# ಇತರರ ಕಾಳಜಿಯಲ್ಲಿ ಸ್ವಯಂ ನಿರ್ಲಕ್ಷ್ಯ ಸಲ್ಲದು

ಉದಯರಶ್ಮಿ ದಿನಪತ್ರಿಕೆ

– ಸಂತೋಷ್ ರಾವ್ ಪೆರ್ಮುಡ,
ಪೆರ್ಮುಡ ಮನೆ, ಪಟ್ರಮೆ ಗ್ರಾಮ
ಮತ್ತು ಅಂಚೆ ಬೆಳ್ತಂಗಡಿ ತಾಲೂಕು,



ಒಂದು ಕಾಡಿನಲ್ಲಿ ಹೆಣ್ಣು ಕೋತಿಯೊಂದು ತನ್ನ ಮ–ರಿಯೊಂದಿಗೆ ವಾಸವಾಗಿದ್ದು, ಮ–ರಿಯನ್ನು ಅತಿಯಾಗಿ ಪ್ರೀತಿಸುತ್ತಿತ್ತು. ಮರಿಯನ್ನು ತಾನು ಕಣ್ಣಲ್ಲಿ ಕಣ್ಣಿಟ್ಟು ಕಾಯುತ್ತಾ ತನಗೆ ತಿನ್ನಲು ಏನು ಸಿಕ್ಕಿದರೂ ಮೊದಲಿಗೆ ತನ್ನ ಮ–ರಿಗೇ ತಿನ್ನಲು ನೀಡುತ್ತಿತ್ತು. ತಾನು ಎಲ್ಲೇ ಹೋದರೂ ಮರಿಯನ್ನು ತನ್ನ ಹೊಟ್ಟೆಯ ಅಡಿಯಲ್ಲಿಯೇ ಹಿಡಿದುಕೊಂಡು ತಿರುಗುತ್ತಿತ್ತು. ಇದರಿಂದಾಗಿ ಗುಂಪಿನಲ್ಲಿದ್ದ ಇತರ ಕೋತಿಗಳಿಗೂ ಆ ತಾಯಿ ಕೋತಿಯ ತನ್ನ ಮರಿಯ ಮೇಲಿನ ಪ್ರೀತಿಯ ಕುರಿತು ಅಸೂಯೆಯಿತ್ತು.



ಒಮ್ಮೆ ಆಕಾಶವಿಡೀ ಕಾರ್ಮೋಡದಿಂದ ಕಪ್ಪಿಟ್ಟುಕೊಂಡು ಜೋರಾಗಿ ಗಾಳಿಯು ಬೀಸಲಾರಂಭಿಸಿತು. ಮಳೆಯು ಜೋರಾಗಿ ಸುರಿಯಲಾರಂಭಿಸಿ ಊರಿನ ಹಳ್ಳಕೊಳ್ಳಗಳು, ನದಿ ತೊರೆಗಳು ತುಂಬಿ ಹ–ರಿಯಲು ಪ್ರಾರಂಭಿಸಿದವು. ಇಡೀ ಊರಿಗೆ ಪ್ರಳಯವು ಆವರಿಸಿ ಕಾಡಿನ ಮರಗಿಡಗಳೆಲ್ಲವೂ ನದಿಯ ನೀರಿಗೆ ಕೊಚ್ಚಿಕೊಂಡು ಹೋಗಲಾರಂಭಿಸಿತು. ಅದೇ ರೀತಿ ಈ ಕೋತಿಯಿದ್ದ ಕಾಡೂ ಪ್ರಳಯಕ್ಕೆ ತುತ್ತಾಗಿ ಅಲ್ಲಿನ ಪ್ರಾಣಿಗಳೆಲ್ಲಾ ದಿಕ್ಕುಪಾಲಾಗಿ ಒಡಲಾರಂಭಿಸಿದವು. ಕೆಲವು ಪ್ರವಾಹದ ನೀರಿಗೆ ಕೊಚ್ಚಿಕೊಂಡು ಹೋದರೆ ಕೆಲವು ಅಲ್ಲೋ ಇಲ್ಲೋ ಓಡಲಾರಂಭಿಸಿದವು. ಅದೇ ರೀತಿ ಈ ತಾಯಿ ಕೋತಿಯೂ ಪ್ರವಾಹದ ನೀರಿಗೆ ಹೆದರಿ ತನ್ನ ಮರಿಯನ್ನು ಹಿಡಿದುಕೊಂಡು ಕಾಡಿನ ಅತ್ಯಂತ ದೊಡ್ಡದಾದ ಮರವನ್ನೇರಿ ಕುಳಿತಿತು. ಕಾಡು ಸಂಪೂರ್ಣವಾಗಿ ನೀರಿನಿಂದ ಆವೃತವಾಗಿ ಮರಗಳೆಲ್ಲವೂ ಉರುಳಲಾರಂಭಿಸಿದವು. ದೊಡ್ಡದಾದ ಮರವಾದ್ದರಿಂದ ತಾಯಿ ಕೋತಿಯು ಮಗುವನ್ನು ಅಪ್ಪಿಕೊಂಡು ಮರವನ್ನು ಗಟ್ಟಿಯಾಗಿ ಹಿಡಿದುಕೊಂಡು ಕುಳಿತಿತು.

ಪ್ರವಾಹವು ಮತ್ತಷ್ಟು ಹೆಚ್ಚಾಗಿ ತಾಯಿ ಕೋತಿ ಕುಳಿತಿದ್ದ ಮರವು ಅರ್ಧದಷ್ಟು ಮುಳುಗಿದಾಗ ತಾಯಿ ಕೋತಿಯು ಮತ್ತಷ್ಟು ಎತ್ತರಕ್ಕೆ ಹೋಗಿ ಕುಳಿತಿತು. ಆದರೆ ಪ್ರವಾಹವು ಮತ್ತೂ ಹೆಚ್ಚಾಗಿ ತಾಯಿ ಕೋತಿ ಕುಳಿತಿದ್ದ ಮರವು ಬಹುತೇಕ ಮುಳುಗಿ ಮರದ ಕೊಂಬೆಗಳಷ್ಟೇ ಕಾಣಿಸುತ್ತಿದ್ದವು. ತಾಯಿ ಕೋತಿಯು ಮರಿಯನ್ನು ಹಿಡಿದುಕೊಂಡು ತಾನಿದ್ದ ಮರದ ಅತ್ಯಂತ ಉದ್ದದ ಕೊಂಬೆಯನ್ನೇರಿತು. ಪ್ರವಾಹದ ನೀರು ಮತ್ತಷ್ಟು ಮೇಲೇರಿತು. ಕೋತಿಯು ಕೊಂಬೆಯ ತುತ್ತ ತುದಿಗೆ ಏರಿ ಕುಳಿತರೂ ನೀರಿನ ಮಟ್ಟ ಇಳಿಯಲೇ ಇಲ್ಲ. ತಾಯಿ ಕೋತಿಯ ದೇಹವು ಅರ್ಧಷ್ಟು ನೀರಿನಲ್ಲಿ ಮುಳುಗಿದಾಗ ತಾಯಿಯು ತನ್ನ ಮರಿಯನ್ನು ನೀರಿನಲ್ಲಿ ಕೊಚ್ಚಿಹೋಗದಿರಲಿ ಎಂದು ಎತ್ತಿ ಹಿಡಿದುಕೊಂಡಿತು. ಪ್ರವಾಹ ಮತ್ತಷ್ಟು ಮೇಲೇರಿ ನೀರು ತನ್ನ ಮೂಗಿನವರೆಗೆ ಬಂದಾಗ ತಾಯಿಯು ತನ್ನ ತುದಿಕಾಲಲ್ಲಿ ನಿಂತುಕೊಂಡು ತನ್ನ ಮರಿಯನ್ನು ರಕ್ಷಿಸುವ ಪ್ರಯತ್ನವನ್ನು ಮಾಡಿತು. ಪ್ರವಾಹ ಕಮ್ಮಿಯಾಗದೇ ಮತ್ತಷ್ಟು ಹೆಚ್ಚಾಗಿ ಪೂರ್ತಿ ತಾಯಿ ಕೋತಿಯು ಮುಳುಗುವ ಹಂತಕ್ಕೆ ಬಂದಾಗ ತಾನೂ ಇನ್ನು ಬದುಕಲಾರೆನೆಂದು ಅರಿತ ತಾಯಿ ಕೋತಿಯು ತಾನೆತ್ತಿ ಹಿಡಿದುಕೊಂಡಿದ್ದ ತನ್ನ ಮರಿಯನ್ನೆ ತನ್ನ ಕಾಲಿನ ಅಡಿಗೆ ಇಟ್ಟು ಮರಿಯ ಮೇಲೆ ನಿಂತಿತು. ಪ್ರವಾಹದ ನೀರು ಮತ್ತಷ್ಟು ಹೆಚ್ಚಿ ತಾಯಿ ಮತ್ತು ಮರಿ ಕೋತಿಗಳೂ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋದವು.



ಮರಿಯನ್ನು ಅತಿಯಾಗಿ ಪ್ರೀತಿಸುತ್ತಿದ್ದ ತಾಯಿ ಕೋತಿಯು ತನ್ನ ಅಳಿವು ಯಾ ಉಳಿವಿನ ಪ್ರಶ್ನೆ ಬಂದಾಗ ತನ್ನ ಉಳಿವಿನ ಯೋಚನೆಯನ್ನೇ ಮಾಡಿ ತನ್ನ ಮರಿಯನ್ನು ಕಾಲಿನ ಅಡಿಗಿಟ್ಟು ನಿಂತಿತು. ಈ ಮೂಲಕ ತಾಯಿ ಕೋತಿಯು ಎಲ್ಲಕ್ಕಿಂತ ತನ್ನ ಅಸ್ತಿತ್ವವೇ ಮುಖ್ಯವೆಂದು ಸಾರಿತು.

ಜೀವನದಲ್ಲಿ ಎಲ್ಲರ ಬಗೆಗೆ, ಎಲ್ಲದರ ಬಗೆಗೆ, ತನ್ನವರ ಬಗೆಗೆ ಕಾಳಜಿ ಇರಬೇಕಾದುದು ವ್ಯಕ್ತಿಯ ಪರಮ ಧರ್ಮ. ಆದರೆ ತನ್ನ ಕುರಿತಾಗಿ ಕೊಂಚವಾದರೂ ಕಾಳಜಿ ಇಲ್ಲವೆಂದಾದರೆ ಜೀವನಕ್ಕೆ ಅರ್ಥವೂ ಇರುವುದಿಲ್ಲ. ನಮ್ಮ ಅಸ್ತಿತ್ವ ಇದ್ದರೆ ಮಾತ್ರ ಎಲ್ಲವೂ ಇದ್ದು, ಎಲ್ಲರ ಕುರಿತೂ ಕಾಳಜಿವಹಿಸಬಹುದು. ತನ್ನನ್ನು ತಾನೇ ನಿರ್ಲಕ್ಷಿಸಿಕೊಳ್ಳುವುದು ಸಲ್ಲದು.



**Printed by:** AVINASH BIDARI, **Published and Onwed by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR